ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ನವಂಬರ್ 2019

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-19 ಸಂಚಿಕೆ-11 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಉಡುಪಿಯಲ್ಲಿ ದೀಪಾವಳಿ ಆಚರಣೆ





ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ಆಶ್ರಯದಲ್ಲಿ ದಿನಾಂಕ 30-10-2019ರ ಸಂಜೆ ಶ್ರೀ ಶಾರದಾ ಮಂಟಪದಲ್ಲಿ ಸಂಭ್ರಮದ ದೀಪಾವಳಿ ಆಚರಣೆ ಮಾಡಲಾಯಿತು. ಮಹಿಳೆಯರು ಮಕ್ಕಳು ಸೇರಿ ಸಮಾಜ ಬಾಂಧವರು ಜೊತೆಯಾಗಿ ಶ್ರೀ ಶಾರದಾ ದೇವಸ್ಥಾನದಲ್ಲಿ ಮತ್ತು ದೇವಳದ ಮುಂಭಾಗದ ಇಡೀ ಪ್ರಾಂಗಣದಲ್ಲಿ ಸುಮಾರು 1000ಕ್ಕಿಂತಲೂ ಹೆಚ್ಚು ಮಣ್ಣಿನ ಹಣತೆಗಳನ್ನು ಶೃಂಗಾರವಾಗಿ ಇಟ್ಟು, ಎಣ್ಣೆ-ಬತ್ತಿ ಜೋಡಿಸಿ ದೀಪಾರಾಧನೆಯನ್ನು ನೆರವೇರಿಸಿದರು. ಪ್ರಾಂಗಣದ ಮಧ್ಯದಲ್ಲಿ ವಿವಿಧ ಪುಷ್ಪಗಳಿಂದ ಅಲಂಕೃತಗೊಂಡ ದೀಪವನ್ನು ಡಾ| ಪಿ.ಜಿ. ರಾಯರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಸಲಹೆಗಾರರಾದ ಶ್ರೀ ಸಿ.ಎಸ್.ರಾವ್, ಶ್ರೀ ವೈ. ಭುವನೇಂದ್ರ ರಾವ್, ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಂಜುನಾಥ ಹೆಬ್ಬಾರ್ ಹಾಗೂ ಆಡಳಿತ ಮಂಡಳಿಯ ಸದಸ್ಯರು ಈ ಸಂದರ್ಭದಲ್ಲಿ ಜೊತೆಗಿದ್ದರು. ಮೊದಲಿಗೆ ಮಹಿಳೆಯರು ಭಜನೆ, ನಾಮ ಸಂಕೀರ್ತನೆ ಕೈಗೊಂಡರೆ, ನಂತರ ಕುಣಿತದ ಭಜನೆ, ಕೋಲಾಟನೃತ್ಯ, ಮೊದಲಾದುವುಗಳಿಂದ ರಂಜಿಸಿದರು.

ಇದರೊಂದಿಗೆ ವಿಶೇಷ ಅಲಂಕೃತಗೊಂಡ ಶ್ರೀ ಶಾರದಾ ಮಾತೆಗೆ ದೀಪಾವಳಿಯ ವಿಶೇಷ ಪೂಜೆ, ಪ್ರಾರ್ಥನೆ ನೆರವೇರಿತು. ಬಳಿಕ ಹೊರ ಪ್ರಾಂಗಣದಲ್ಲಿ ವಿವಿಧ ನೃತ್ಯ ಪ್ರಕಾರಗಳ ಪ್ರದರ್ಶನ ನಡೆಯಿತು. ವಿವಿಧ ರೀತಿಯ ನೃತ್ಯಗಳಿಗೆ ಮಕ್ಕಳು ಉತ್ಸಾಹದಿಂದ ಕುಣಿಯುತ್ತಿದ್ದಂತೆ ಮಹಿಳೆಯರು, ಹಿರಿಯ ಸಮಾಜ ಬಾಂಧವರು ನರ್ತಿಸಿದ್ದು ಎಲ್ಲರನ್ನು ರಂಜಿಸಿತು.


ಕೊನೆಯಲ್ಲಿ ಸಾಂಪ್ರದಾಯಿಕ ಕೋಲಾಟ, ಹುಲಿ ನೃತ್ಯ, ಯಕ್ಷಗಾನದ ಹಾಡುಗಳ ಧ್ವನಿಗೆ ತಾಳ-ಲಯಕ್ಕೆ ತಕ್ಕಂತೆ ವಿವಿಧ ರೀತಿಯಲ್ಲಿ ಹೆಜ್ಜೆಗಾರಿಕೆ ಮಾಡಿದ್ದು ಸಮಾಜ ಬಾಂಧವರ ಉತ್ಸಾಹದ ಉತ್ತುಂಗತೆಯನ್ನು ತೋರುವಂತಿತ್ತು.

ರಾತ್ರಿ 8.30ಕ್ಕೆ ಸರಿಯಾಗಿ ದೀಪಾವಳಿಯ ಹಬ್ಬದೂಟ ಪ್ರಾರಂಭಗೊಂಡಿತು. ತುಳುನಾಡಿನ ಸಾಂಪ್ರದಾಯಿಕ ಅನ್ನ ಸಾರು ಸಾಂಬಾರುಗಳ ಜೊತೆ ಕಡುಬು- ಕಾಯಿಹುಳಿ- ಕಾಯಿಹಾಲು, ಸೊಪ್ಪಿನ ವಡೆ, ಮುಳ್ಳುಸೌತೆ ಇಡ್ಲಿ(ಸಿಹಿ ಮತ್ತುಖಾರ) ಪಾಯಸ ಮತ್ತು ಮೊಸರನ್ನ ಮೊದಲಾದ ರುಚಿಕರ ಹಬ್ಬದೆಡುಗೆಯನ್ನು ಆಗಮಿಸಿದ್ದ ಎಲ್ಲರೂ ಸವಿದರು.

ಒಟ್ಟಿನಲ್ಲಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಏರ್ಪಡಿಸಿದ ಈ ವಿನೂತನ ದೀಪಾವಳಿ ಆಚರಣೆಗೆ ನಿರೀಕ್ಷೆಗಿಂತಲೂ ಹೆಚ್ಚು ಸಮಾಜ ಬಾಂಧವರು ಆಗಮಿಸಿದ್ದು, ಸಾರ್ಥಕತೆಯನ್ನು ಪಡೆಯಿತು. ಅಂದು ಆಗಮಿಸಿದ ಎಲ್ಲ ಸಮಾಜ ಬಾಂಧವರಿಗೆ ಸಂಘವು ಕೃತಜ್ಞತೆಯನ್ನು ಅರ್ಪಿಸುತ್ತದೆ.

ವರದಿ : ಶ್ರೀ ಕೃಷ್ಣಕುಮಾರ್ ರಾವ್, ಮಟ್ಟು

## ಶ್ರೀ ಶಾರದಾ ಮಂಟಪದಲ್ಲಿ ಸೌಂದರ್ಯಲಹರಿ ಸಪ್ತಾಹ



ಉಡುಪಿಯ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟಿನ ವತಿಯಿಂದ ಜ್ಞಾನಭಾರತಿ ಉಡುಪಿ ಇವರ ಸಹಯೋಗದೊಂದಿಗೆ ಶ್ರೀ ಆದಿ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿ ಪಾರಾಯಣ ಹಾಗೂ ಅಖಂಡ ಭಜನಾ ಸಪ್ತಾಹವನ್ನು ತಾ.18.10.2019ರಿಂದ ತಾ.24.10.2019 ವರೆಗೆ ಮಹಿಳಾ ವೇದಿಕೆಯ ಸಹಕಾರದೊಂದಿಗೆ ಆಚರಿಸಲಾಯಿತು. ಪ್ರತಿದಿನವೂ ಮಹಿಳಾ ವೇದಿಕೆಯ ಸದಸ್ಯೆಯರು ಹಾಗೂ ಭಕ್ತರು ಪಾರಾಯಣದಲ್ಲಿ ಭಾಗವಹಿಸಿದರು. ತಾ.24.10.2019ರಂದು ಸಪ್ತಾಹದ ಸಮಾರೋಪ ಸಮಾರಂಭ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

*With Best Compliments from :*




*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

## ಸಾದರದ ಆಮಂತ್ರಣ



ಸಮಾಜ ಬಾಂಧವರೇ,

ಶ್ರೀ ಆದಿಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲೊಂದಾದ **ಶ್ರೀ ಕ್ಷೇತ್ರ ಪುರಿ ಗೋವರ್ಧನ ಪೀಠದ ಪೀಠಾಧಿಪತಿಗಳಾದ** ಜಗದ್ಗುರು ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳು ಪ್ರಥಮ ಬಾರಿಗೆ ಉಡುಪಿಗೆ ಆಗಮಿಸಲಿದ್ದು 2019 ನವಂಬರ್ ತಿಂಗಳ 27, 28, 29ರಂದು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ಜಗದ್ಗುರುಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಕಾರ್ಯಕ್ರಮಗಳ ವಿವರಗಳಿಗಾಗಿ ಸಂಪರ್ಕಿಸಿ :**

ಶ್ರೀ ಕೆ. ಮಂಜುನಾಥ ಹೆಬ್ಬಾರ್
(9611099894)
ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಂಘ (ರಿ.)
ಹಾಗೂ ಕೋಶಾಧಿಕಾರಿ, ಸ್ವಾಗತ ಸಮಿತಿ

ಶ್ರೀ ಯು. ಪ್ರಫುಲ್ಲಚಂದ್ರ ರಾವ್
(9880896166)
ಪ್ರಧಾನ ಕಾರ್ಯದರ್ಶಿ
ಸ್ವಾಗತ ಸಮಿತಿ

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಒಂದು ಕಾಲದಲ್ಲಿ ಸಂಘಟನೆಯಲ್ಲಿ ಮುಂಚೂಣಿಯಲ್ಲಿದ್ದ ಸಮಾಜ ನಮ್ಮದು. ಶೋಷಣೆಯ ವಿರುದ್ಧ ಹೋರಾಡುತ್ತಾ ಎಲ್ಲೆಡೆಗಳಲ್ಲಿ ಸಂಘಗಳನ್ನು ಸ್ಥಾಪಿಸಿಕೊಂಡು, ಅಲ್ಲಲ್ಲಿ ಹಿಂದುಳಿದಿದ್ದ ನಮ್ಮವರನ್ನು ಗುರುತಿಸಿ, ಮಾರ್ಗದರ್ಶನವಿತ್ತು ಮುಂದೆ ತಂದದ್ದು ನಮ್ಮ ಸಮಾಜದಲ್ಲಿ ಸದ್ದಿಲ್ಲದೇ ನಡೆದ ಕ್ರಾಂತಿ. ಹೀಗೆ ಸಂಘಟನೆಯು ಉಮೇದು ಉತ್ತುಂಗದಲ್ಲಿದ್ದ ಕಾಲದಲ್ಲಿ ಮಂಗಳೂರಿನಲ್ಲಿ ಹಾಗೂ ಉಡುಪಿಯಲ್ಲಿ ಸಭಾಭವನಗಳನ್ನು ಸಹಾ ಕಟ್ಟಲಾಯಿತು. ಈ ಎರಡು ಸಭಾಭವನಗಳು, ಸುಮಾರು ಐವತ್ತು ವರ್ಷಗಳು ಕಳೆದರೂ, ಇನ್ನೂ ತಮ್ಮ ಛಾಪನ್ನು ಉಳಿಸಿಕೊಂಡಿವೆ. ಅದೇ ರೀತಿ ಮುಂಬಯಿ ಸಂಘದ ವತಿಯಿಂದಲೂ ಆಗ ಮುಂಬಯಿಗೆ ಹೊಸದಾಗಿ ವಲಸೆ ಬಂದವರಿಗೆ ಅನುಕೂಲವಾಗಲೆಂದು ಒಂದೆರಡು ವಸತಿನಿವಾಸಗಳನ್ನು ಖರೀದಿಸಲಾಗಿತ್ತು. ಇದು ಸುಮಾರು ಐವತ್ತು ವರ್ಷಗಳ ಹಿಂದಿನ ಮಾತು. ಇಂದು ನಮ್ಮ ಸಮಾಜವು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದೆ. ಇಷ್ಟೊಂದು ಪ್ರಗತಿಯಾಗಿದ್ದರೂ ನಂತರದ ಈ ಐವತ್ತು ವರ್ಷಗಳಲ್ಲಿ ಇನ್ನೊಂದೆರಡು ಕಡೆಗಳಲ್ಲಿ ಕಟ್ಟಲಾದ ಸಭಾಭವನಗಳನ್ನು ಬಿಟ್ಟರೆ ಬೇರೇನೂ ವಿಶೇಷವಾದದ್ದು ನಮ್ಮ ಸಮಾಜದ ಸಂಘಗಳ ವತಿಯಿಂದ ಸೇರ್ಪಡೆಯಾಗಿಲ್ಲ. ಇತರ ಶೋಷಿತ ಸಮಾಜಗಳ ಸಂಘಗಳು ಕಟ್ಟಿರುವ ಸಂಸ್ಥೆಗಳನ್ನು ತುಲನೆ ಮಾಡಿ ನೋಡಿದಾಗ ನಾವು ಈ ನಿಟ್ಟಿನಲ್ಲಿ ಹಿಂದೆ ಬಿದ್ದೆವು ಎಂದು ಅನಿಸುವುದಿಲ್ಲವೇ? ಹಾಗಾದರೆ ನಮ್ಮ ಸಮಾಜದ ಸಂಘಗಳ ಮುಖಾಂತರ ಶಿಕ್ಷಣ ಸಂಸ್ಥೆಗಳಾಗಲಿ, ಆಸ್ಪತ್ರೆಗಳಾಗಲಿ, ಗುರುಕುಲಗಳಾಗಲಿ ಕಟ್ಟಲಾಗದೇ ಇರಲು ಕಾರಣವೇನಿರಬಹುದು?

ಮೊದಲನೆಯದಾಗಿ ಇಂತಹಾ ಸಂಸ್ಥೆಗಳ ಅಗತ್ಯತೆ. ಕರಾವಳೀ ಪ್ರದೇಶದಲ್ಲಿರುವ ನಮಗೆ ಶಿಕ್ಷಣ ಇತ್ಯಾದಿ ಸೇವಾಸಂಸ್ಥೆಗಳ ಕೊರತೆ ಎಂದೂ ಕಾಡಿದ್ದಿಲ್ಲ. ನಾವು ಯೋಚಿಸುವ ಮುನ್ನವೇ ಹಲವಾರು ಮಂದಿ ಇಂತಹಾ ಸಂಸ್ಥೆಗಳನ್ನು ಸ್ಥಾಪಿಸಿಬಿಟ್ಟಿದ್ದು ಅವುಗಳ ಸಂಖ್ಯೆ ಎಷ್ಟು ಹೆಚ್ಚಿದೆಯೆಂದರೆ ಈಗ ಈ ಸೇವೆಗಳ ವ್ಯಾಪಾರೀಕರಣವಾಗಿ ಬಿಟ್ಟಿದೆ. ಬೆಂಗಳೂರು ಮುಂಬಯಿ ಯಲ್ಲಿರುವ ನಮ್ಮವರಿಗಂತೂ ಇಂತಹಾ ಸೇವಾ ಸಂಸ್ಥೆಗಳ ಕೊರತೆ ಕಾಡಿರಲಿಕ್ಕೆ ಸಾಧ್ಯವೇ ಇಲ್ಲ. ಹಾಗಾಗಿ ಇಂತಹಾ ಸಂಸ್ಥೆಗಳ ಅಗತ್ಯ ಮನಗಾಣದ್ದರಿಂದ ನಮ್ಮ ಸಂಘಗಳು ಈ ಕೆಲಸಕ್ಕೆ ಮುಂದಾಗಲಿಲ್ಲ ವೆಂದು ಭಾವಿಸಬಹುದು.

ಎರಡನೆಯದಾಗಿ ಇಂತಹಾ ಸೇವಾ ಸಂಸ್ಥೆಗಳಿಗೆ ಅಧಿಕ ಬಂಡವಾಳ ಬೇಕು. ಇಂತಹಾ ಬಂಡವಾಳವನ್ನು ಎತ್ತಲು ಎಲ್ಲರಿಗೂ ಒಪ್ಪಿಗೆಯಾಗುವ ಪ್ಲಾನ್ ಬೇಕು, ವಿಶ್ವಾಸಾರ್ಹ ನಾಯಕನ ಮುಂದಾಳುತ್ವ ಬೇಕು. ಇಂತಹ ಬಂಡವಾಳವನ್ನಾದರೂ ಕಾಡಿಬೇಡಿಯಾದರೂ ಒಟ್ಟುಮಾಡಬಹುದು ಆದರೆ ಈ ತರಹದ ಸಂಸ್ಥೆಗಳಿಗೆ ಬೇಕಾದ ಜಾಗ, ಕಟ್ಟಡ, ಸಲಕರಣೆ ಇತ್ಯಾದಿ ಮೂಲಸೌಕರ್ಯ ಒದಗಿಸಲು, ಆಯಾ ಕ್ಷೇತ್ರದಲ್ಲಿ ಅನುಭವವಿರುವವರೊಬ್ಬರು, ತಮ್ಮೆಲ್ಲ ಸಮಯ ಹಾಗೂ ಶ್ರಮವನ್ನು ನಿಸ್ವಾರ್ಥಿಯಾಗಿ ಧಾರೆಯೆರೆಯದಿದ್ದಲ್ಲಿ ಸಾಧ್ಯವೇ ಇಲ್ಲ. ಸಂಸ್ಥೆಯ ಸ್ಥಾಪನೆಯಾದ ನಂತರವೂ ಇಂತಹದೇ ವ್ಯಕ್ತಿಯೊಬ್ಬರು ಅಥವಾ ಅಂಥಹವರ ಗುಂಪೊಂದು ಸಂಪೂರ್ಣವಾಗಿ ತಮ್ಮನ್ನು ತಾವು ಅದರಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯವೂ ಇದೆ. ನಡುವೆ ಕಾಲೆಳೆಯುವವರನ್ನು ಕೂಡ ಸಹಿಸಕೊಳ್ಳಬೇಕಾಗಬಹುದು. ಹಾಗಾಗಿ ಇಂತಹಾ ದೊಡ್ಡ ಕೆಲಸಕ್ಕೆ ಮುನುಗ್ಗುವವರು ಸಿಗುವುದು ಕಷ್ಟ. ಹಾಗಾಗಿ ಸದ್ಯೋಭವಿಷ್ಯ ದಲ್ಲಿ ಇಂತಹಾ ಕಾರ್ಯವನ್ನು ನಿರೀಕ್ಷಿಸುವುದು ಹಗಲುಗನಸಾದೀತು.

ಆದರೆ ನಮ್ಮ ಸಮಾಜದಲ್ಲಿ ಇಂತಹಾ ದೊಡ್ಡ ದೊಡ್ಡ ಸಂಸ್ಥೆಗಳನ್ನು ಕಟ್ಟಿದವರು ನೂರಾರು ಮಂದಿ ಇದ್ದಾರೆ. ಇಂತಹಾ ಸಂಸ್ಥೆಗಳ ಮುಖ್ಯಸ್ಥರಾಗಿ ಕಾರ್ಯ ನಿಭಾಯಿಸುತ್ತಿರುವವರಂತೂ ಸಾವಿರಾರು ಜನ ಇದ್ದಾರೆ. ಇಂತಹಾ ಸಂಸ್ಥೆಗಳಿಂದ ನಮ್ಮ ಸಮಾಜಬಾಂಧವರಿಗೆ ಉಪಯೋಗ ವಾಗುವಂತೆ ಯಾಕೆ ನಾವು ಪ್ರಯತ್ನಿಸ ಬಾರದು? ನಮ್ಮವರು ಇಂತಹಾ ಸಂಸ್ಥೆಗಳನ್ನು ಕಟ್ಟಿ ಅವರು ಬೆಳೆಯುವ ಜೊತೆಗೆ ನಮ್ಮ ಸಮಾಜವೂ ಬೆಳೆಯುವಂತೆ ನಮ್ಮ ಸಂಘಗಳು ಪ್ರೋತ್ಸಾಹಿಸಬಹು ದಲ್ಲವೇ? ಈ ಸಂಸ್ಥೆಗಳ ಸ್ಥಾಪಕರನ್ನು ನಮ್ಮ ಸಮಾಜದ ತೆಕ್ಕೆಯುಲ್ಲಿ ಇಟ್ಟುಕೊಂಡು, ನಮ್ಮ ಸಮಾಜದ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾ ಸದಾ ಸಮಾಜದ ಸಂಪರ್ಕದಲ್ಲಿ ಇರುವಂತೆಯೂ ನಮ್ಮ ಸಮಾಜದ ಮೇಲೆ ಅಭಿಮಾನವು ಇರುವಂತೆಯೂ ಮಾಡಬಹುದಲ್ಲವೇ? ಆದುದರಿಂದ ನಮ್ಮ ಸಂಘಗಳ ಮುಖಾಂತರ ಇಂತಹವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಂತೂ ಮೊದಲಾಗಿ ಆಗಬೇಕು. ನಮ್ಮ ಸಮಾಜದ ಸುಪರ್ದಿಯಲ್ಲಿರುವ ಆರ್ಥಿಕ ಸಂಸ್ಥೆಗಳು ಇವರಿಗೆ ರಿಯಾಯಿತಿಯ ದರದಲ್ಲಿ ಸಾಲವನ್ನಿತ್ತು ಸಹಕರಿಸಿದಲ್ಲಿ ಅದು ಅತ್ಯುತ್ತಮ ನಡೆಯಾಗುತ್ತದೆ.

ಇದೇ ಬರುವ 2020ರ ಇಸವಿಯ ಜನವರಿ ತಿಂಗಳಲ್ಲಿ ತಾ 11 ಹಾಗೂ 12 ರಂದು ಜಾಗತಿಕಮಟ್ಟದ ಸ್ಥಾನಿಕ ಬ್ರಾಹ್ಮಣರ ಸಮ್ಮೇಳನವು ಬೆಂಗಳೂರಿನಲ್ಲಿ ಜರುಗಲಿದೆ. ಈ ಸಮ್ಮೇಳನದಲ್ಲಿ ನಮ್ಮ ಸಮಾಜದ ಸಾಧಕರನ್ನು ಪ್ರೋತ್ಸಾಹಿಸುವ ಬಗ್ಗೆ ವಿಚಾರಮಂಥನ ಜರಗಲಿ. ಹಾಗೆಯೇ ಇದು ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಸಾಧಕರನ್ನು ಮತ್ತು ಉದ್ಯಮಿಗಳನ್ನು ಹಾಗೂ ವೃತ್ತಿಪರರನ್ನು ಗುರುತಿಸಿ ಸಮ್ಮಾನಿಸುವ ವೇದಿಕೆಯಾಗಲಿ ಹಾಗೂ ಅದರ ಪ್ರಯೋಜನ ನಮ್ಮ ಸಮಾಜಕ್ಕೆ ದೊರಕಲಿ ಎಂದು ಹಾರೈಸುತ್ತೇನೆ.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



ತಂತ್ರಾಡಿ ವಿಶ್ವನಾಥ ಶಾನುಭೋಗ್

☎ 94487 24161
97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




**With Best Compliments From :**

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES

★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಪುರಿ ಗೋವರ್ಧನ ಪೀಠಾಧೀಶ್ವರರು ಉಡುಪಿಯಲ್ಲಿ

ಶ್ರೀ ಆದಿಶಂಕರರು ಕ್ರಿ.ಶ. 7ನೇ ಶತಮಾನದಲ್ಲಿ ಸನಾತನ ಧರ್ಮ ರಕ್ಷಣೆಗಾಗಿ ಕೇರಳದ ಕಾಲಟಿಯಿಂದ ಕಾಲ್ನಡಿಗೆಯಲ್ಲಿ ಹೊರಟು ಭಾರತದಾದ್ಯಂತ ಸಂಚರಿಸಿ ನಾಲ್ಕು ವೇದಗಳಿಗೆ ಅನುಸಾರವಾಗಿ ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದ ವಿಚಾರ ನಮಗೆಲ್ಲಾ ತಿಳಿದಿದೆ. ಈ ಆಮ್ನಾಯ ಪೀಠಗಳಲ್ಲಿ ಒಂದಾದ ಪುರಿ ಗೋವರ್ಧನ ಪೀಠವು ಈಶಾನ್ಯ ಹಾಗೂ ಪೂರ್ವ ಭಾರತದಲ್ಲಿ ಸನಾತನ ಧರ್ಮ ರಕ್ಷಣೆಗಾಗಿ ಅವಿರತ ಶ್ರಮಿಸುತ್ತಿರುವುದು ಸತ್ಯ ವಿಷಯವಾಗಿದೆ.

ಪ್ರಸಕ್ತ ಶ್ರೀ ಗೋವರ್ಧನ ಪೀಠದ ಶಂಕರಾಚಾರ್ಯರಾಗಿ ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳವರು ಪೀಠಾಧಿಪತಿಗಳಾಗಿ ವಿರಾಜಮಾನರಾಗಿದ್ದಾರೆ. ಶ್ರೀ ಶ್ರೀಗಳು ವೇದ ಹಾಗೂ ವಿಜ್ಞಾನಗಳಲ್ಲಿ ಅಪಾರ ಪಾಂಡಿತ್ಯ ಹೊಂದಿ, ಸನಾತನ ಹಿಂದೂ ಧರ್ಮ ರಕ್ಷಣೆಗಾಗಿ ಮಾತ್ರವಲ್ಲದೆ, ಗೋಹತ್ಯೆ ನಿಷೇಧ, ರಾಮಜನ್ಮಭೂಮಿ ಸಂರಕ್ಷಣೆ, ಮತಾಂತರ ಮೊದಲಾದ ಹಿಂದೂ ಧರ್ಮದ ಕ್ಲಿಷ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ರಾಷ್ಟ್ರದಲ್ಲಿ ಅಗ್ರ ಪಂಕ್ತಿಯಲ್ಲಿದ್ದಾರೆ. ಇದಲ್ಲದೆ ಈ ಎಲ್ಲಾ ಸಮಸ್ಯೆಗಳಿಗೆ ಜನ ಸಾಮಾನ್ಯರಿಗೂ ಮಾರ್ಗದರ್ಶನ ನೀಡುವಲ್ಲಿ ಮುಂಚೂಣಿಯಲ್ಲಿದ್ದಾರೆ. ವೈಜ್ಞಾನಿಕ ರಂಗದಲ್ಲಿಯೂ ಮಹಾಜ್ಞಾನಿಗಳಾಗಿರುವ ಶ್ರೀ ಶ್ರೀ ಗಳು ಸುಮಾರು 600 ಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ರಚಿಸಿ ಪ್ರಕಟಿಸಿದ್ದಾರೆ. ವಿಶೇಷವಾಗಿ ಖಗೋಳ ವಿಜ್ಞಾನಶಾಸ್ತ್ರದಲ್ಲಿ ಪರಿಣತಿ ಹೊಂದಿರುವ ಇವರು ಭಾರತದ 'ಇಸ್ರೋ' ಹಾಗೂ ಅಮೇರಿಕಾದ 'ನಾಸಾ' ಗಳಂತಹ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುತ್ತಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ.

ಇಂತಹ ಘನ ಪಾಂಡಿತ್ಯವುಳ್ಳ ಶ್ರೀ ಶ್ರೀ ಗಳವರು ದಕ್ಷಿಣ ಭಾರತದಲ್ಲಿ ವಿಜಯ ಯಾತ್ರೆಯನ್ನು ಕೈಗೊಳ್ಳಲಿದ್ದು, ಆಂಧ್ರ, ತಮಿಳುನಾಡು, ಕೇರಳ ರಾಜ್ಯಗಳ ಪ್ರವಾಸವನ್ನು ಮುಗಿಸಿ 2019 ರ ನವೆಂಬರ್ 27 ರಂದು ಬೆಳಿಗ್ಗೆ 6.00 ಗಂಟೆಗೆ ರೈಲಿನ ಮೂಲಕ ಉಡುಪಿಗೆ ಆಗಮಿಸಲಿದ್ದಾರೆ. ಆಗಮಿಸಿದ ಶ್ರೀ ಶ್ರೀಗಳು ಅವರಿಗಾಗಿ ಈಗಾಗಲೇ ನಿಗದಿಪಡಿಸಿದ ನಿವಾಸದಲ್ಲಿ ಮೊಕ್ಕಾಂ ಹೂಡಲಿದ್ದು ಅಂದು ಸಂಜೆ 5.00 ಗಂಟೆಗೆ ಸರಿಯಾಗಿ ಉಡುಪಿ ಶ್ರೀ ಶಾರದಾ ಮಂಟಪದಲ್ಲಿ ಸಾರ್ವಜನಿಕರಿಗಾಗಿ ಏರ್ಪಡಿಸಿಲಾದ ಧರ್ಮ ಸಭೆಯಲ್ಲಿ ಸನಾತನ ಧರ್ಮದ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ.

28 ರಂದು ಬೆಳಿಗ್ಗೆ 10.00 ಗಂಟೆಗೆ ಮತ್ತೆ ಶ್ರೀ ಶಾರದಾ ಮಂಟಪದಲ್ಲಿ ಸಾರ್ವಜನಿಕರೊಂದಿಗೆ ಹಾಗೂ ಧರ್ಮ ಜಿಜ್ಞಾಸುಗಳೊಂದಿಗೆ "ಸಂವಾದ ಕಾರ್ಯಕ್ರಮವೂ" ಏರ್ಪಡಲಿದೆ. 28 ರಂದು ಸಂಜೆ ಮತ್ತು 29 ರ ಬೆಳಿಗ್ಗೆ ಈಗಾಗಲೇ ನಿಗದಿಪಡಿಸಿರುವ ಕಾರ್ಯಕ್ರಮಗಳಂತೆ ಹಲವು ವಿದ್ಯಾಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ಉಪನ್ಯಾಸ ಹಾಗೂ ಮಾರ್ಗದರ್ಶನ ಶಿಬಿರಗಳಲ್ಲಿಯೂ ಭಾಗವಹಿಸಲಿದ್ದಾರೆ. 29ರ ಸಂಜೆ 6.00 ಗಂಟೆಗೆ ಶ್ರೀ ಶ್ರೀ ಗಳು ರೈಲಿನಲ್ಲಿ ಬೆಂಗಳೂರಿಗೆ ನಿರ್ಗಮಿಸುವರು.

ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಸ್ವಾಮೀಜಿಯವರ ಉಡುಪಿ ಆಗಮನದ ಈ ಸಂದರ್ಭದಲ್ಲಿ ಅವರ ಎಲ್ಲಾ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಲು ಅನುಕೂಲವಾಗುವಂತೆ ಉಡುಪಿ ಶಾಸಕರಾದ ಶ್ರೀ ರಘುಪತಿ ಭಟ್ ಅವರ ಗೌರವಾಧ್ಯಕ್ಷತೆಯಲ್ಲಿ ಶ್ರೀ ಮಹೇಶ್ ಠಾಕೂರ್ ಕಾರ್ಯಾಧ್ಯಕ್ಷರಾಗಿ, ಶ್ರೀ ಪ್ರಫುಲ್ಲಚಂದ್ರ ರಾವ್ ಪ್ರಧಾನ ಕಾರ್ಯದರ್ಶಿಗಳಾಗಿ, ಶ್ರೀ ಮಂಜುನಾಥ ಹೆಬ್ಬಾರ್ ಕೋಶಾಧಿಕಾರಿಗಳಾಗಿ ಹಾಗೂ ವಿವಿಧ ಸಮಾಜದ ಗಣ್ಯರನ್ನು ಒಳಗೊಂಡ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಪುರಿ ಜಗದ್ಗುರು ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಸ್ವಾಮೀಜಿಯವರು ಮೊದಲ ಭಾರಿಗೆ ಉಡುಪಿಗೆ ಆಗಮಿಸುತ್ತಿದ್ದು ಅವರ ಸಂದರ್ಶನವೇ ನಮ್ಮ ಮಹಾ ಭಾಗ್ಯವಾಗಿದೆ. ಶ್ರೀ ಶ್ರೀಗಳ ಶ್ರೀ ಶಾರದಾ ಮಂಟಪದಲ್ಲಿ ನಡೆಯುವ ಧಾರ್ಮಿಕ ಸಭೆಗಳಲ್ಲಿ ಹಾಗೂ ಇತರ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ನಮ್ಮ ಸಮಾಜದ ಎಲ್ಲಾ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕೃತಾರ್ಥರಾಗಬೇಕೆಂದು ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ವಿನಂತಿಸಿಕೊಂಡಿದ್ದಾರೆ.

## ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು

ಅಂತರಾಷ್ಟ್ರೀಯ ಮಟ್ಟದ ಸ್ಥಾನಿಕ ಸಂಘಗಳು
ಮತ್ತು ಸಂಪನ್ಮೂಲ ವ್ಯಕ್ತಿಗಳ ಒಕ್ಕೂಟದ ವತಿಯಿಂದ

ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸಾನಿಧ್ಯದಲ್ಲಿ

**ತಾ.11-01-2020 ಮತ್ತು ತಾ.12-01-2020ರಂದು**

**ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ-2020**

ಜರಗಲಿದೆ.

ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
**ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಭಾ,**
**ಬೆಂಗಳೂರು**

**ಅಧ್ಯಕ್ಷರು ಹಾಗೂ ಪದಾಧಿಕಾರಿಗಳು**
**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ),**
**ಮಂಗಳೂರು**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಸುರತ್ಕಲ್

**13-19, ಶ್ರೀರಮಣ, ಎನ್.ಐ.ಟಿ.ಕೆ ಎದುರು, ಶ್ರೀನಿವಾಸನಗರ, ಸುರತ್ಕಲ್ - 575025.**

## "ಶ್ರೀ ಸುಬ್ರಹ್ಮಣ್ಯ ಟ್ರೋಫಿ"

ಪ್ರಿಯ ಬಾಂಧವರೇ,

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ಇದೇ ತಾ.22-12-2019ನೇ ರವಿವಾರದಂದು ನವಮಂಗಳೂರು ಬಂದರು ಮಂಡಳಿ (N.M.P.T), ಪಣಂಬೂರಿನ ಕ್ರೀಡಾಂಗಣದಲ್ಲಿ 6 ನೇ ವರ್ಷದ "ಶ್ರೀ ಸುಬ್ರಹ್ಮಣ್ಯ ಟ್ರೋಫಿ" ಸೀಮಿತ ಓವರ್‌ಗಳ ಕ್ರಿಕೆಟ್ ಪಂದ್ಯಾಟವನ್ನು ನಮ್ಮ ಸಮಾಜ ಬಾಂಧವರಿಗೆ ಏರ್ಪಡಿಸಲಾಗಿದೆ. ಕ್ರೀಡಾಕೂಟವು ಬೆಳಿಗ್ಗೆ ಘಂಟೆ 8 ಕ್ಕೆ ಆರಂಭವಾಗಲಿದ್ದು, ತಾವು ತಮ್ಮ ತಂಡದ ಸದಸ್ಯರೊಂದಿಗೆ ಆ ದಿನ ಬೆಳಿಗ್ಗೆ 7.30 ರೊಳಗೆ ಆಗಮಿಸಿ ತಮ್ಮ ತಂಡದ ಇರುವಿಕೆಯನ್ನು ದೃಢೀಕರಿಸುವಂತೆ ಕೇಳಿಕೊಳ್ಳಲಾಗಿದೆ.

ಈ ಪಂದ್ಯಾಟವು ನಮ್ಮ ಸಮಾಜದ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನಮ್ಮ ಸಮಾಜದ ಯುವಕರು ಮಾತ್ರ ಪಾಲ್ಗೊಳ್ಳುವಂತೆ ಕೋರಲಾಗಿದೆ.

ಈ ಪಂದ್ಯಾಟದಲ್ಲಿ ಭಾಗವಹಿಸುವ ತಂಡಗಳು 15-12-2019 ರೊಳಗೆ ಪ್ರವೇಶ ಪತ್ರವನ್ನು ಕಳುಹಿಸಿ, **ಶ್ರೀ ಕಾರ್ತಿಕ್ ರಾವ್ (9591662899), ಶ್ರೀ ಶಿವಪ್ರಸಾದ್ ರಾವ್ (8105946640), ಶ್ರೀ ಪ್ರವೀಣ್ ರಾವ್ (9448953331)** ಇವರನ್ನು ಸಂಪರ್ಕಿಸಬೇಕಾಗಿ ವಿನಂತಿಸಲಾಗಿದೆ.

**: ಪಂದ್ಯಾಟದ ನಿಯಮಾವಳಿಗಳು :**

* ಈ ಪಂದ್ಯಾಟವು ಸೀಮಿತ ಓವರಿನಿಂದ ಕೂಡಿದ್ದು ಓವರ್ ಆರ್ಮ್ ಬೌಲಿಂಗ್ ಆಗಿರುತ್ತದೆ.
* ತಂಡದಲ್ಲಿ ಕಡ್ಡಾಯವಾಗಿ ಸಮಾಜ ಬಾಂಧವರ ಯುವಕರಿಗೆ ಮಾತ್ರ ಅವಕಾಶ, ಬೇರೆ ಸದಸ್ಯರು ಕಂಡು ಬಂದಲ್ಲಿ ಆ ತಂಡವನ್ನು ಪಂದ್ಯಾಕೂಟದಿಂದ ಅನರ್ಹಗೊಳಿಸಲಾಗುವುದು.
* ನಿರ್ಣಾಯಕರ ತೀರ್ಮಾನವೇ ಅಂತಿಮ ತೀರ್ಮಾನ.
* ಪಂದ್ಯಾಟದಲ್ಲಿ ಟೆನ್ನಿಸ್ ಬಾಲನ್ನು ಉಪಯೋಗಿಸಲಾಗುವುದು.

**ಅಧ್ಯಕ್ಷರು ಮತ್ತು ಸದಸ್ಯರು,**
ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಸುರತ್ಕಲ್


SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE



ಎಮ್. ದೇವಾನಂದ್ ಭಟ್ Cell : 9845644556
9483913344



**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




**RAJESH POWER PRESS**

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

*With Best Complimemts From*

SRI M. SHAILESH RAO Ph : 9448624324
B.E., Civil
Civil Engineer & Contractor
**SRI MALAVIKA ASSOCIATES**
KALSANKA-UDUPI ROAD, UDUPI.
Website : shreemaalavikaassociates.com

# ಆಯುರ್ವೇದ ಚಿಕಿತ್ಸೆಯ ದಿಗ್ಗಜರು (ನೆನಪಿನಂಗಳದಿಂದ)

**ಲೇಖಕ : ಜಿ.ಕೆ ಕೋಲ್ಪೆ**

ನನಗೆ ತಿಳಿದಂತೆ 50–60ರ ದಶಕದಲ್ಲಿ ನಮ್ಮ ಹಳ್ಳಿ–ಶಹರಗಳಲ್ಲಿ ಪಾಶ್ಚಾತ್ಯ ಪದ್ಧತಿಯ (ಅಲೋಪಥಿ) ಚಿಕಿತ್ಸೆ ಹೆಚ್ಚು ಪ್ರಚಲಿತವಾಗಿರಲಿಲ್ಲ. ನಾಟಿ, ಯುನಾನಿ ಮತ್ತು ಆಯುರ್ವೇದ ಔಷಧಿಗಳು ಜನಪ್ರಿಯವಾಗಿದ್ದವು. ಪ್ರತೀ ಹಳ್ಳಿಗಳಲ್ಲಿ ಗಿಡಮೂಲಿಕೆಗಳಿಂದ ತಯಾರಿಸಿದ ಔಷಧಿಗಳಿಂದ ಕಾಯಿಲೆ–ಕಸಾಲೆಗಳನ್ನು ವಾಸಿ ಮಾಡುವ ಪಂಡಿತರುಗಳದ್ದೇ ಕಾರುಬಾರು, ಹಿಂದಿನವರು ಬರೆದು ಸಂರಕ್ಷಿಸಿದ ತಾಳೆಗರಿ ಓಲೆಗಳಿಂದ ಓದಿ–ತಿಳಿದು, ಮಂತ್ರ–ತಂತ್ರದೊಂದಿಗೆ ಚಿಕಿತ್ಸೆ ಕೊಡುವವರೂ ಇದ್ದರು. ಯಾವುದೇ ಶುಲ್ಕ ವಿಧಿಸದೆ ಬಡಬಗ್ಗರ ಸೇವೆ ಮಾಡಿದವರೂ ಇದ್ದರು. ನನ್ನ ಮೂಲಮನೆಯಲ್ಲಿ ಹಿರಿಯರ ಲಾಗಾಯ್ತು ಇಂತಹ ಸೇವೆ ದೊರೆಯುತಿತ್ತೆಂದು ನಾನು ಹೆಮ್ಮೆಯಿಂದ ಹೇಳಬಲ್ಲೆ. ನನ್ನ ತಂದೆ ದಿ| ಪಂಡಿತ ಕೋಲ್ಪೆ ವೆಂಕಟ್ರಣ್ಣಯ್ಯನವರು, ವಿಷಜಂತು ಕಡಿತದವರಿಗೆ ಚಿಕಿತ್ಸೆ ಕೊಡುತ್ತಿರುವಾಗ ಮಧ್ಯ ರಾತ್ರಿಯಾದರೂ ನಾವು ಮನೆಮಂದಿ ಅವರಿಗೆ ಸಹಕರಿಸಿದ್ದು ನೆನಪಿನಲ್ಲಿದೆ, ಇದಲ್ಲದೆ, ಸರ್ಪಸುತ್ತು (ಹರ್ಪಿಸ್), ಬಾಣಂತಿ ಮತ್ತು ಮಕ್ಕಳ ಖಾಯಿಲೆಗಳಿಗೆ ಅವರ ಔಷಧಿ ರಾಮಬಾಣವಾಗಿತ್ತು. ಔಷಧೀಯ ಗಿಡ–ಮೂಲಿಕೆಗಳನ್ನು, ವಿಟ್ಲ (ಬಂಟವಾಳ ತಾಲೂಕು) ಸಮೀಪದ "ಕಳೆಂಜ ಮಲೆ" ಎಂಬ ಕಾಡಿನಿಂದ ಸಂಗ್ರಹಿಸಿ ಅರಿಷ್ಟ–ಅಸನಾದಿಗಳು–ಮಾತ್ರೆಗಳು ಹಾಗೂ ಭಸ್ಮಾದಿಗಳನ್ನು ಅನುಭವಿಗಳಿಂದ ತಯಾರಿಸಿ ಚಿಕಿತ್ಸೆ ಮಾಡುತ್ತಿದ್ದರು. ಅನುಕೂಲಸ್ಥರು ಕೊಟ್ಟಷ್ಟು ಸಂಭಾವನೆ ಸ್ವೀಕರಿಸಿ ತೃಪ್ತಿ ಪಡುತ್ತಿದ್ದರು. ಅಡಿಕೆ ಹಾಗೂ ಭತ್ತದ ಕೃಷಿ ಜೀವನಕ್ಕೆ ಆಧಾರವಾಗಿತ್ತು. ಬಡಬಗ್ಗರು ಎರಡು–ಮೂರು ದಿನ ಮನೆಯ ಪಕ್ಕದ ಕೊಟ್ಟಿಗೆಯಲ್ಲಿ ಆಶ್ರಯ ಪಡೆದು, ಔಷೋಧೋಪಚಾರಗಳಿಂದ ಗುಣಮುಖರಾಗಿ ಹಿಂತಿರುಗುತ್ತಿದ್ದರು. ಮನೆಯ ದೈವಕ್ಕೆ 'ಹರಕೆ ಕಾಣಿಕೆ' ಬಿಟ್ಟರೆ ಯಾವುದೇ ಶುಲ್ಕವಿಲ್ಲ. ತಂದೆಯವರ ನಿಧನಾನಂತರ (1968) ಈ ಔಷಧೋಪಚಾರಕ್ಕೆ ಪೂರ್ಣವಿರಾಮ ಬಿತ್ತು. ಸಂಬಂಧಪಟ್ಟ ಕೆಲವು ತಾಳೆಓಲೆ ಗ್ರಂಥಗಳನ್ನು ನನ್ನ ಸೋದರತ್ತೆ ಗಂಡ ಪಂಡಿತ ಜನಾರ್ಧನಯ್ಯನವರು ಕೊಂಡು ಹೋಗಿ, ಅದರ ಆಧಾರದಲ್ಲಿ ಔಷಧಿ ಕೊಡುತ್ತಿದ್ದರು. ಗ್ರಹಚಾರವಶಾತ್ ಬೆಂಕಿ ಆಕಸ್ಮಿಕದಲ್ಲಿ ಆ ಗ್ರಂಥಗಳು ನಾಶವಾದವಂತೆ. ಇನ್ನೋರ್ವ ನಾಟಿ ಔಷಧಿ ಕೊಡುತ್ತಿದ್ದ ನನ್ನ ಸೋದರಮಾವ ಪೊಳಲಿ ದಿ| ನಟ್ಟೋಜ ಕೃಷ್ಣಯ್ಯನವರು ನನ್ನ ತಂದೆಯವರಿಂದ ಮಾಹಿತಿ ಸಂಗ್ರಹಿಸಿ ಔಷಧಿ ಕೊಡುತ್ತಿದ್ದರು, ಅವರ ನಂತರ, ಅದೂ ಸ್ಥಗಿತಗೊಂಡಿದೆ.

ಈ ಕೆಳಕಂಡ ಆಯುರ್ವೇದ ಜಗತ್ತಿನ ದಿಗ್ಗಜರುಗಳನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಇವರೆಲ್ಲರೂ ನಮ್ಮ ಹೆಮ್ಮೆಯ ಸಮಾಜ ಬಂಧುಗಳು:

1) ಮಂಗಳೂರಿನ ಆಯುರ್ವೇದ ಭೂಷಣ ದಿ. ಡಾ| ಎಮ್.ವಿ. ಶಾಸ್ತ್ರಿ 2) ಡಾ| ದಿ| ಎನ್.ವಿ. ಉಪಾಧ್ಯಾಯರು, ನಂದಿಕೂರು, 3) ಮಂಗಳೂರಿನ ದಿ| ಪಿ.ಎನ್.ವಿ. ಶರ್ಮ, 4) ಇನ್ನ ಕೇದಗೆ ದಿ| ಐ.ಕೆ.ಪಿ. ಶರ್ಮ, 5) ಕ್ಯಾದಿಗೆ ದಿ| ಡಾ| ಕೆ.ವಿ. ಶರ್ಮ ಮಂಗಳೂರು 6) ಡಾ| ದಿ| ಅನ್ನಪೂರ್ಣ ರಾವ್, ಕುಡ್ವ ಪದ್ಮನಾಭ ರಾವ್ ಅವರ ಹೆಂಡತಿ, 7) ಆಯುರ್ವೇದ ಭೂಷಣ ದಿ| ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ, 8) ದಿ| ಹೆಜಮಾಡಿ ಗೋವಿಂದ ಭಟ್, ಕಿನ್ನಿಗೋಳಿ, 9) ದಿ| ಬಜ್ಪೆ ಡಾ| ಭಾಸ್ಕರ ರಾವ್, 10) ಬಪ್ಪನಾಡು ದಿ| ಪಂಡಿತ ವಾಸುದೇವ ರಾವ್, 11) ದಿ| ಪಂಡಿತ ರಾಮರಾವ್, ಬಪ್ಪನಾಡು 12) ದಿ| ಹಳೆಯಂಗಡಿ ಹರಿ ಭಟ್ಟರು (ಅಪ್ಪಿ ಭಟ್ರು), 13) ಕಾರ್ಕಳ ಅನಂತಶಯನವಾಸಿ ಕಲ್ಲಹುತ್ತಿಗೆ ದಿ| ನಾರಾಯಣ ರಾಯರು (ಅಯ್ಯಣ್ಣ ಪಂಡಿತರು), 14) ಬದೆಂಜವಾಸಿ ಕಡಬ ಕೊಳಂದೂರು ದಿ| ಡಾ| ಕೃಷ್ಣಮೂರ್ತಿರಾಯರು, 15) ದಿ| ವಾಟೆ ಯೋಗೀಶ ಶರ್ಮ (ಪುತ್ತೂರು) 16) ಆಯುರ್ವೇದ ರತ್ನ ದಿ| ವಾಮನ ಶರ್ಮ ಕಾರ್ಕಳ, 17) ಸಾಹಿತ್ಯ ಮತ್ತು ಆಯುರ್ವೇದ ಶಿರೋಮಣಿ ದಿ| ಕಮಲಾ ಬಾಯಿ ವಿ. ಉದ್ಯಾವರ 18) ವೈದ್ಯಭೂಷಣ ನಂದಿಕೂರು ದಿ| ಹರಿಶ್ಚಂದ್ರ ಉಪಾಧ್ಯಾಯ ಪಲಿಮಾರು 19) ದಿ| ಸುಬ್ರಹ್ಮಣ್ಯ ಶರ್ಮ ಕಾಂಜರಕಟ್ಟೆ 20) ದಿ| ಸುಶೀಲಾ ಬಾಯಿ ಬಿ. ಮುಂಬಯಿ 21) ದಿ| ಕೆ.ಎನ್.ಶರ್ಮ ಮಂಗಳೂರು 22) ಆಯುರ್ವೇದ ಶಿರೋಮಣಿ ದಿ| ನಾರಾಯಣ ಶಾಸ್ತ್ರಿ ಮದ್ರಾಸು 23) ದಿ| ಆನಂದ ರಾವ್ ಮುದರಂಗಡಿ 24) ಪಂಡಿತ ದ್ವಿವೇದಿ ದಿ| ಸೀತಾರಾಮ ಶಾಸ್ತ್ರಿ ಪಾವಂಜೆ.

ನಮ್ಮ ಸಮಾಜದ ಇನ್ನೂ ಸಾಕಷ್ಟು ಮಂದಿ ಈ ಮೇಲಿನವರ ಹಾಗೆ ಜನತಾ ಸೇವೆ ಮಾಡಿ ಆಯುರ್ವೇದ ಜಗತ್ತಿಗೆ ಕೊಡಿಗೆ ನೀಡಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ನನಗೆ ಸಿಕ್ಕಿದ ಮಾಹಿತಿ ಹಾಗೂ ನನ್ನ ನೆನಪಿನಂಗಳದಲ್ಲಿ ಹಾದುಹೋದವರನ್ನು ನೆನಪಿಸಿದ್ದೇನೆ. ಉಳಿದವರ ಬಗ್ಗೆ ಮಾಹಿತಿ ಇದ್ದಲ್ಲಿ, ಈ ದಿಗ್ಗಜರೊಂದಿಗೆ ಅವರನ್ನೂ ಸ್ಮರಿಸಿಕೊಳ್ಳಿ! ಮಾಹಿತಿ ತಪ್ಪಾಗಿದ್ದಲ್ಲಿ ಸರಿಪಡಿಸಿಕೊಳ್ಳುವಿರಾಗಿ ನಂಬಿದ್ದೇನೆ. ಇತ್ತೀಚೆಗೆ ಆಯುರ್ವೇದವು ಜಗತ್ತಿನೆಲ್ಲೆಡೆ ಯುವಜನಾಂಗಕ್ಕೆ ದಾರಿದೀಪವಾಗಿ ಅವರ ಭವಿಷ್ಯಕ್ಕೆ ಆಸರೆಯಾಗುತ್ತಿದೆ. ಇದಕ್ಕೆ ಪ್ರೋತ್ಸಾಹಿಸಿ! ಆರೋಗ್ಯವಂತ ಸಮಾಜ ನಿರ್ಮಾಣವಾಗಲಿ ಎಂದು 'ಧನ್ವಂತರಿ' ಮಹಾವಿಷ್ಣುವಿನಲ್ಲಿ ಪ್ರಾರ್ಥನೆ!

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.15-12-2019 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.28-11-2019 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.17-11-2019, ತಾ.01-12-2019 ಮತ್ತು ತಾ.16-12-2019 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಡಿಸೆಂಬರ್ ತಿಂಗಳ ಶಾಶ್ವತ ಸೇವಾಕರ್ತರ ವಿವರ

1 ಶ್ರೀ ಕೃಷ್ಣ ಪ್ರಕಾಶ್, ಬೆಂಗಳೂರು
2 ಶ್ರೀಮತಿ ಶಂಕರಿ ಮೋಹನ್ ರಾವ್ ಕೊಳಂಬೆ, ಉಡುಪಿ
3 ಶ್ರೀಮತಿ ಅಪರ್ಣಲಾಲ್, ಮುಂಬೈ
4 ಶ್ರೀ ಬಿ.ಭವಾನಿ ಶಂಕರ್ ರಾವ್, ಬೆಂಗಳೂರು
5 ಶ್ರೀಕನಿಷ್ಕ ಬಿ.ಹೆಗ್ಡೆ, ಮುಂಬೈ
6 ಶ್ರೀಮತಿ. ಆಶಾ ಅಶೋಕ್ ಎನ್.ರಾವ್, ನಾಸಿಕ್
7 ಶ್ರೀಮತಿ.ಮೀನಾಕ್ಷಿ ಬೆಳ್ಳೆ, ಮುಂಬೈ
8 ಶ್ರೀ ಅಭಿಜಿತ್, ಮುಂಬೈ
9 ಶ್ರೀ. ಪಿ. ಹರಿಕೇಶ್, ಮಣಿಪಾಲ
10 ಶ್ರೀ ಮಂಟ್ರಾಡಿ ಶ್ರೀಕಾಂತ್ ರಾವ್, ಗೋವಾ
11 ಶ್ರೀ ಎ.ವಿಶ್ವನಾಥ್ ರಾವ್, ಮುಂಬೈ
12 ಶ್ರೀಮತಿ ಆಶಾ ಶಶೀಂದ್ರ ರಾವ್, ಬೆಂಗಳೂರು
13 ಶ್ರೀ ಕೆ.ಸೀತಾರಾಮ ರಾವ್, ಪುತ್ತೂರು
14 ಶ್ರೀ ಪಿ.ಸುಬ್ರಹ್ಮಣ್ಯ ರಾವ್, ಬೆಂಗಳೂರು
15 ಶ್ರೀ ಪ್ರಕಾಶ್ ಮಲ್ಯ, ಮೂಡಬಿದ್ರಿ
16 ಶ್ರೀ ಅಮಿತ್ ಜೆ.ರಾವ್, ದೊಂಬಿವಿಲ್ಲಿ
17 ಶ್ರೀ ಎ.ವಿಷ್ಣುಮೂರ್ತಿ ರಾವ್, ಉಡುಪಿ
18 ಶ್ರೀ ಕರುಣಾಕರ್ ಬೆಳ್ಳೆ, ಬಂಟ್ವಾಳ
19 ಶ್ರೀಮತಿ ಜ್ಯೋತಿ ಸಂಜಯ್, ಮಂಗಳೂರು
20 ಶ್ರೀ ಸುಬ್ರಹ್ಮಣ್ಯ ರಾವ್, ಅಲೆವೂರು
21 ಡಾ. ಜಿ.ಕೆ. ರವಿಚಂದ್ರ ರಾವ್, ಬೆಂಗಳೂರು
22 ಶ್ರೀಮತಿ ಬಿ.ಪದ್ಮಾವತಿ ವಿಠ್ಠಲ್ ರಾವ್, ಬೆಂಗಳೂರು
23 ಸ್ನೇಹಾ, ಎರ್ನಾಕುಲಂ
24 ಶ್ರೀಮತಿ ವೇಣುಗೋಪಾಲ್ ರಾವ್, ಅಂಬಲ್ಪಾಡಿ
25 ಶ್ರೀ ಹೆಚ್.ಎನ್. ಶ್ಯಾನುಭಾಗ್, ಅಂಬಲ್ಪಾಡಿ
26 ಶ್ರೀಮತಿ ಅನುಸೂಯ ಆನಂದ್ ರಾವ್.ಬಿ. ಲಾಥೋರ್
27 ಶ್ರೀ ಎ.ಕೃಷ್ಣಮೂರ್ತಿ ರಾವ್, ಹಿರಿಯಡ್ಕ
28 ಶ್ರೀ ವಿಜಯ ಮಲ್ಯ, ಬೆಂಗಳೂರು
29 ಶ್ರೀಮತಿ ಸಹನ ಕುಮಾರಿ, ಮಂಗಳೂರು
30 ಶ್ರೀಮತಿ ಭಾನುಪ್ರಿಯ ಚಿತ್ತರಂಜನ್ ರಾವ್ ವೈ, ಬೆಂಗಳೂರು
31 ಶ್ರೀ ರಾಜೇಶ್ ಮತ್ತು ಜ್ಯೋತಿ, ಮುಂಬೈ
32 ಶ್ರೀ ಡೆಬೊತ್ತಮ್ ಮುಖರ್ಜಿ, ಕೊಲ್ಕತ್ತಾ
33 ಸ್ನೇಹಾಲ್, ಮಂಗಳೂರು
34 ಶ್ರೀಮತಿ ಚರೀಶ್ಮ ಸಂಜಯ್ ಮಂಗಳೂರು
35 ಶ್ರೀ ಸಾಂತೂರ್ ಅಮರ್‌ದೀಪ್, ಸುರತ್ಕಲ್
36 ಶ್ರೀ ಮಂಜುನಾಥ್ ಬಿ.ರಾವ್ ಉಡುಪಿ
37 ಶ್ರೀ ವಿಜಯ್ ಮಂಬೈ
38 ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್, ಬ್ರಹ್ಮಾವರ

### ವೃಶ್ಚಿಕ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-11-2019 | ವೃಶ್ಚಿಕ ಸಂಕ್ರಮಣ | 08-12-2019 | ಸರ್ವೈಕಾದಶಿ |
| 22-11-2019 | ಸ್ಮಾರ್ತೈಕಾದಶಿ | 12-12-2019 | ಹುಣ್ಣಿಮೆ |
| 23-11-2019 | ಭಾಗವತ-ವೈಷ್ಣವೈಕಾದಶಿ | 13-12-2019 | ಹೇಮಂತ ಋತು, ಮಾರ್ಗಶಿರ ಮಾಸದ ಕೃಷ್ಣಪಕ್ಷಾರಂಭ |
| 26-11-2019 | ಅಮಾವಾಸ್ಯೆ | 15-12-2019 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9-13ಕ್ಕೆ |
| 27-11-2019 | ಹೇಮಂತ ಋತು, ಮಾರ್ಗಶಿರ ಮಾಸದ ಶುಕ್ಲಪಕ್ಷಾರಂಭ | 16-12-2019 | ಧನು ಸಂಕ್ರಮಣ |
| 01-12-2019 | ಸ್ಕಂದ ಪಂಚಮಿ | 18-12-2019 | ಗುರು ಅಸ್ತ, ಗುರು ಮೌಢ್ಯಾರಂಭ |
| 02-12-2019 | ಸುಬ್ರಹ್ಮಣ್ಯ ಷಷ್ಠಿ | | |

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ| ಅಂಬಲಪಾಡಿ ಕೃಷ್ಣರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಲೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ| ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ| ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣರಾವ್ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.

# ಉಡುಪಿ ಪರಿಸರದಲ್ಲಿ ಪ್ರಥಮವಾಗಿ ‘ಹೂವಿನಕೋಲು’

ಸಾಮಾನ್ಯವಾಗಿ ಯಕ್ಷಗಾನ ಬಯಲಾಟದ ಮೇಳಗಳಲ್ಲಿ ಭಾಗವಹಿಸುವ ಕಲಾವಿದರು ನವರಾತ್ರಿ ಸಂದರ್ಭದಲ್ಲಿ ಚಿಕ್ಕ ಮಕ್ಕಳಿಗೆ ‘ಚೌಪದ’ವನ್ನೂ, ಯಕ್ಷಗಾನದ ಸಂಭಾಷಣೆಯನ್ನೂ ಕಲಿಸಿ, ಯಕ್ಷಗಾನದ ‘ಹಿಮ್ಮೇಳ’ ದೊಂದಿಗೆ ಮನೆಮನೆಗಳಲ್ಲಿ ತಿರುಗಾಟ ಮಾಡುವ ಸಂಪ್ರದಾಯವೊಂದು ಕುಂದಾಪುರ ತಾಲೂಕಿನಲ್ಲಿ ಪ್ರಚಲಿತದಲ್ಲಿದೆ ಈ ಕಾರ್ಯಕ್ರಮವೊಂದನ್ನು ಈ ಬಾರಿಯ ನವರಾತ್ರಿಯಲ್ಲಿ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಬಾಂಧವರು ನಡೆಯಿಸಿರುವರು. ನವರಾತ್ರಿ ಹಬ್ಬದ ಆರನೇ ದಿನ ಭಾನುವಾರ ಹರಿದಾಸ ಶ್ರೀ ಮ.ನಾ. ಹೆಬ್ಬಾರರ ನೇತೃತ್ವದಲ್ಲಿ ಇಂತಹ ಹೂವಿನ ಕೋಲಿನ ಒಂದು ತಂಡವು ನಮ್ಮವರ ಕೆಲವು ಮನೆಗಳಲ್ಲಿ ಸಂಚರಿಸಿ, ಸಂಜೆ ಆರು ಗಂಟೆಯಿಂದ ಶ್ರೀ ಶಾರದಾ ಮಂಟಪದ ಸಭಾಭವನದ ವೇದಿಕೆಯಲ್ಲಿ ತಮ್ಮ ಕಾರ್ಯಕ್ರಮವನ್ನು ನೀಡಿರುತ್ತದೆ. ಶ್ರೀ ಹರಿದಾಸ ಮ.ನಾ. ಹೆಬ್ಬಾರರು ಯಕ್ಷಗಾನದ ಭಾಗವತರಾಗಿಯೂ ಸಂತೆಕಟ್ಟೆಯ ಶ್ರೀ ಕೃಷ್ಣನವರು ಮದ್ದಳೆವಾದಕರಾಗಿಯೂ ಹಿಮ್ಮೇಳ ಒದಗಿಸಿದ್ದರು. ಶ್ರೀ ಎಮ್. ಸಂತೋಷ್‌ರವರ ಮಕ್ಕಳಾದ ಆದಿತ್ಯ ಮತ್ತು ಸ್ಕಂದ, ಚೊಕ್ಕಾಡಿ ಶ್ರೀ ದಿವಾಕರರಾಯರ ಮಗ ವಿಘ್ನೇಶ್ ಮತ್ತು ಶ್ರೀ ಟಿ.ವಿಶ್ವನಾಥ ಶ್ಯಾನುಭೋಗ್ (ಯಕ್ಷಗಾನ ಕಲಾವಿದ) ಇವರ ಮಗ ಸ್ಕಂದ ಇವರುಗಳು ಹೂವಿನಕೋಲು ಹಿಡಿದ ವಿದ್ಯಾರ್ಥಿಗಳಾಗಿ ಭಾಗವಹಿಸಿದ್ದರು. ‘ನಾರಾಯಣಾಯ ನಮೋ ನಾರಾಯಣಾಯ’ ಎಂಬ ಸಾಂಪ್ರದಾಯಿಕ ‘ಚೌಪದ’ ದ ನಂತರ , ದ್ರೌಪದಿ ಪ್ರತಾಪ, ಕರ್ಣಾರ್ಜುನ ಕಾಳಗ, ಸುಧನ್ವಾರ್ಜುನ ಕಾಳಗ ಮತ್ತು ಪಂಚವಟಿ (ಸೀತೆ ಮತ್ತು ಶ್ರೀರಾಮರ ಸಂಭಾಷಣೆ) ಈ ನಾಲ್ಕು ಪ್ರಸಂಗಗಳನ್ನು ಪ್ರಸ್ತುತ ಪಡಿಸಲಾಗಿತ್ತು. ವಿದ್ಯಾರ್ಥಿಗಳಿಗೆಲ್ಲ ದಸರಾ ರಜೆಯು ಆರಂಭವಾದುದೇ ಅಕ್ಟೋಬರ್ ತಿಂಗಳ ಆರನೇ ತಾರೀಕಿನಿಂದ. ಆದುದರಿಂದ ಹೆಚ್ಚು ಮನೆಗಳಿಗೆ ಭೇಟಿ ನೀಡಿ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಲು ಸಾಧ್ಯವಾಗಲಿಲ್ಲ. ಕೇವಲ ‘ಹೂವಿನ ಕೋಲು’ ಎಂದರೆ ಎಂತಹ ಕಲೆ ಎಂಬುದರ ಪರಿಚಯವನ್ನು ಮಾತ್ರ ಮಾಡಲು ಸಾಧ್ಯವಾಯಿತು.

ವಿಶ್ರಾಂತ ಶಿಕ್ಷಕರಾದ ಶ್ರೀ ಕೃಷ್ಣಕುಮಾರ್ ರಾವ್, ಮಟ್ಟು, ಶ್ರೀ.ಟಿ. ವಿಶ್ವನಾಥ ಶ್ಯಾನುಭೋಗ್, ಶ್ರೀ ಚೊಕ್ಕಾಡಿ ದಿವಾಕರ ರಾವ್ ಇವರುಗಳು ಸಹಕರಿಸಿದ್ದರು. ಈ ಕಾರ್ಯಕ್ರಮವನ್ನು ಸಭಾಭವನದ ವೇದಿಕೆಯಲ್ಲಿ ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆಗಳು. ಈ ಕಾರ್ಯಕ್ರಮವು ನಮ್ಮ ಬಾಂಧವರ ಮೆಚ್ಚುಗೆಯನ್ನು ಗಳಿಸುವಲ್ಲಿ ಯಶಸ್ವಿ ಯಾಗಿರುತ್ತದೆ.

ವರದಿ : ಮ.ನಾ.ಹೆಬ್ಬಾರ.

# ವಿಜಯದಶಮಿಯ ಯಕ್ಷಗಾನ ಕಾರ್ಯಕ್ರಮದ ವರದಿ




ಶ್ರೀ ಶಾರದಾ ದೇವಸ್ಥಾನದಲ್ಲಿ ಇತ್ತೀಚೆಗೆ ನಡೆದ ನವರಾತ್ರಿಯ ಸಂಭ್ರಮದಲ್ಲಿ ಕೊನೆಯ ದಿನದ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಯಕ್ಷಗಾನವು ಜರಗಿತು. ಚಿಕ್ಕ ಮಕ್ಕಳಿಂದ "ಮೈಂದ-ದ್ವಿವಿದ" ಎಂಬ ಕಥಾಭಾಗ. ಇದರಲ್ಲಿ ಚಿ। ಸ್ಕಂದ ವಿಶ್ವನಾಥ ಶ್ಯಾನುಭೋಗ್-ಮೈಂದ, ಚಿ। ವಿಘ್ನೇಶ್ ರಾವ್-ದ್ವಿವಿದ, ಚಾರಕ ಮತ್ತು ದಾರುಕನಾಗಿ ಚಿ। ಎಂ.ಸ್ಕಂದ ಎಸ್.ರಾವ್, ಕೃಷ್ಣನಾಗಿ ಕು। ಶ್ರೀನಿಧಿ ಶ್ರೀಕಾಂತ ರಾವ್, ಗರುಡನಾಗಿ ಎಂ. ಆದಿತ್ಯ ಎಸ್.ರಾವ್, ಬಲರಾಮನಾಗಿ ಶ್ರೀ ವೈ. ವಾಗೀಶ ರಾವ್, ರುಕ್ಮಿಣಿಯಾಗಿ ಕಾರ್ತಿಕ ದಿವಾಕರ ರಾವ್ ಇವರುಗಳು ಭಾಗವಹಿಸಿ, ಉತ್ತಮ ನಿರ್ವಹಣೆಯನ್ನು ಮಾಡಿ ಸಭಿಕರ ಮನ ಸೆಳೆದರು.

ಎರಡನೆಯದಾಗಿ "ಮಹಾಮಂತ್ರಿ ದುಷ್ಟಬುದ್ಧಿ" (ಭಕ್ತ ಚಂದ್ರಹಾಸ) ಪ್ರಸಂಗವನ್ನು ಶ್ರೀ ಶಾರದಾ ಹವ್ಯಾಸಿ ಯಕ್ಷ ಬಳಗದವರು ಪ್ರಸ್ತುತ ಪಡಿಸಿದರು. ಇದರಲ್ಲಿ ದುಷ್ಟಬುದ್ಧಿಯಾಗಿ ಇಬ್ಬರು:- ಶ್ರೀ ಕೃಷ್ಣಕುಮಾರ್ ಮಟ್ಟು ಮತ್ತು ಶ್ರೀ ಟಿ.ವಿಶ್ವನಾಥ ಶ್ಯಾನುಭೋಗ್ ಇವರುಗಳು ಉತ್ತಮ ನಿರ್ವಹಣೆಯನ್ನು ತೋರಿದರು. ಬ್ರಾಹ್ಮಣನಾಗಿ ಶ್ರೀ ಯು.ಅರವಿಂದ ಕುಮಾರ್, ಚಂದ್ರಹಾಸನಾಗಿ-ಚಿ। ಎಂ. ಸ್ಕಂದ ಸಂತೋಷ್‌ರಾವ್ ಮತ್ತು ಶ್ರೀ ಟಿ. ವಾಗೀಶ ರಾವ್ ಇವರುಗಳ ನಿರ್ವಹಣೆಯು ಉತ್ತಮವಾಗಿತ್ತು. ಕಟುಕರಾಗಿ ಟಿ.ಸ್ಕಂದ, ಚಿ। ವಿಘ್ನೇಶ ಇವರುಗಳು ಅಭಿನಯಿಸಿದ್ದರು. ಕುಳಿಂದನಾಗಿ ಶ್ರೀ ಶ್ರೀಕಾಂತ ರಾವ್, ಮೇಧಾವಿನಿಯಾಗಿ ಶ್ರೀ ವಾಗೀಶ ನಾಗರಾಜ ರಾವ್ ಇವರ ನಿರ್ವಹಣೆ ತೃಪ್ತಿಕರವಾಗಿತ್ತು. ಕಪ್ಪದೂತನಾಗಿಯೂ ಕೊನೆಯಲ್ಲಿ ವಿವಾಹದ ಪುರೋಹಿತನಾಗಿಯೂ ಅಭಿನಯಿಸಿದ ಶ್ರೀ ಅಜಿತ್‌ರಾವ್‌ರವರ ಅಭಿನಯ ಮನೋಜ್ಞವಾಗಿ, ಹಾಸ್ಯಪೂರಿತವಾಗಿಯೂ ಮೂಡಿ ಬಂತು. ಕಥಾನಾಯಕಿ ವಿಷಯೆಯಾಗಿ ಶ್ರೀ ಕಾರ್ತಿಕ ದಿವಾಕರ ರಾವ್‌ರವರ ಅಭಿನಯ ಉತ್ತಮವಾಗಿತ್ತು. ಮದನನಾಗಿ ಶ್ರೀ ವೈ.ವ್ಯಾಸ ನಾಗರಾಜ ರಾವ್ ಇವರ ನರ್ತನ, ಅಭಿನಯಗಳು ಶ್ರೇಷ್ಠ ಮಟ್ಟದಾಗಿದ್ದು, ಮಾತುಕತೆಯಲ್ಲಿ ಪಾತ್ರ ಸಹಜವಾದ ಬಾಲಿಶವು ಅಲ್ಲಲ್ಲಿ ತೋರಿಬರುತ್ತಿತ್ತು. ಕೊನೆಯದಾಗಿ ಪ್ರತ್ಯಕ್ಷಳಾದ ದೇವಿಯಾಗಿ ಕು। ಶ್ರಾವ್ಯಾ ಇವರ ನಿರ್ವಹಣೆ ಸಂದರ್ಭೋಚಿತವಾಗಿತ್ತು.

ಹಿಮ್ಮೇಳದಲ್ಲಿ ಭಾಗವತರುಗಳಾಗಿ ಶ್ರೀಗಳಾದ ಚಂದ್ರಕಾಂತ ರಾವ್ ಮೂಡುಬೆಳ್ಳೆ ಮತ್ತು ಸುಬ್ರಹ್ಮಣ್ಯ ಪ್ರಸಾದ್, ಮುದ್ರಾಡಿ ಇವರುಗಳು ಉತ್ತಮ ನಿರ್ವಹಣೆ ಮಾಡಿದರೆ, ಇವರುಗಳಿಗೆ ಸಾಥಿಗಳಾಗಿ ಮೃದಂಗವಾದನದಲ್ಲಿ ಶ್ರೀ ರತ್ನಾಕರ ಆಚಾರಿ ಮತ್ತು ಶ್ರೀ ಪ್ರದೀಪ ಭಟ್ ಇವರುಗಳ ನಿರ್ವಹಣೆಯು ಸಭಿಕರ ಮನ ತಣಿಸುವಂತಿತ್ತು. ಚೆಂಡೆ ವಾದನದಲ್ಲಿ ಶ್ರೀ ಗಣೇಶ ಶೆಣೈ ಮತ್ತು ರತ್ನಾಕರ ಶೆಣೈ ಇವರುಗಳು ಯೋಗ್ಯವಾಗಿ ಸಹಕರಿಸಿದ್ದರು. ಒಟ್ಟಿನಲ್ಲಿ ಎರಡೂ ಆಖ್ಯಾನಗಳು ಸಭಿಕರ ಮನಗೆಲ್ಲುವಲ್ಲಿ ಸಾರ್ಥಕತೆಯನ್ನು ಪಡೆದವು.

## ಶ್ರೀ ಜಯದುರ್ಗಾಪರಮೇಶ್ವರಿ ದೇವಸ್ಥಾನ, ಕಡಬ

### ಸ್ಥಾನಿಕ ಸಮಾಜ ಬಾಂಧವರಲ್ಲಿ ನಮ್ರ ವಿನಂತಿ

ಕಡಬ ಪೇಟೆಯ ಹೃದಯ ಭಾಗದಲ್ಲಿ ಸ್ಥಾನಿಕ ಸಮಾಜದವರಾದ ಜಡೆಮನೆಯ ಅರುಣಾ ಕುಮಾರ್ ರವರಿಗೆ ಸೇರಿದ ಜಾಗದ ಹಳೆಯ ನಾಗಬನದಲ್ಲಿ ಶ್ರೀದೇವಿಯ ಪಾದ ಸಿಕ್ಕಿದ್ದು ಈ ಬಗ್ಗೆ ಕಾಸರಗೋಡಿನ ಜ್ಯೋತಿಷಿ ಸಿ.ವಿ ಪೊದುವಾಳ್ ಹಾಗೂ ತಂತ್ರಿಗಳಾದ ಪಾವಂಜೆ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪ್ರಶ್ನೆ ಮಾಡಿದಾಗ ಈ ಪಾದವು ಶ್ರೀದೇವಿಯ ಪಾದವಾಗಿದ್ದು ಇದು ರಾಜರ ಕಾಲದಲ್ಲಿ ನಿರ್ಮಾಣವಾಗಿದ್ದು ರಾಜನ ಆಳ್ವಿಕೆಯಲ್ಲಿದ್ದು, ಬಹಳ ವಿಜೃಂಭಣೆಯಿಂದ ಉತ್ಸಾವಾದಿಗಳು ನಡೆಯುತ್ತಿತ್ತು. ಇದರ ಪೂಜಾ ಕಾರ್ಯವನ್ನು ಬ್ರಾಹ್ಮಣರೇ ಮಾಡುತ್ತಿದ್ದು ಸುಮಾರು 300 ವರ್ಷಗಳ ಹಿಂದೆ ಧ್ವಂಸವಾಯಿತೆಂದು ತಿಳಿಸಿದರು. ದೇವಾಲಯವನ್ನು ಪುನರ್ ನಿರ್ಮಾಣ ಮಾಡಬೇಕೆಂದು ತಿಳಿಸಿದ್ದು, ಮನೆಗೆ ಸೇರಿದ ಪಟ್ಟಾ ಸ್ಥಳದಲ್ಲಿ ದೇವಾಲಯ ನಿರ್ಮಿಸಲು ಸೂಕ್ತವೆಂದು ಪ್ರಶ್ನೆಯಲ್ಲಿ ತಿಳಿಸಿರುತ್ತಾರೆ. ಆ ಪ್ರಕಾರ ವಾಸ್ತು ತಜ್ಞ ಪ್ರಸಾದ್ ಮುನಿಯಂಗಳವರ ಮಾರ್ಗದರ್ಶನದಲ್ಲಿ ಹಾಗೂ ಶೃಂಗೇರಿಯ ಜಗದ್ಗುರುಗಳ ಅನುಗ್ರಹವನ್ನು ಪಡೆದು ನೂತನ ಸುಂದರ ಶಿಲಾಮಯ ಗರ್ಭಗುಡಿ ಮತ್ತು ತೀರ್ಥಮಂಟಪದ ಕೆಲಸವನ್ನು ಶೇ.90 ರಷ್ಟು ಪೂರೈಸಿರುತ್ತೇವೆ. ಇನ್ನು ಮುಂದೆ ಸುತ್ತು ಪೌಳಿ, ಬಾವಿ, ವಸಂತ ಮಂಟಪ, ದ್ವಾರಗೋಪುರ, ಅಶ್ವತ್ಥ ಕಟ್ಟೆಗಳ ಕೆಲಸಗಳು ಬಾಕಿ ಇದ್ದು ಸುಮಾರು ಒಂದೂವರೆ ಕೋಟಿ ಖರ್ಚು ತಗಲಬಹುದು.

ಸಮಾಜ ಬಾಂಧವರಲ್ಲಿ ಈ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ ಈ ದೇವಾಲಯ ನಿರ್ಮಾಣ ಪುಣ್ಯ ಕೆಲಸದಲ್ಲಿ ಭಾಗಿಗಳಾಗಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಹಾಗೂ ಮುಂದೆ ನಡೆಯಲಿರುವ ಬ್ರಹ್ಮಕಲಶ ಸಮಾರಂಭಕ್ಕೂ ಸಹಕಾರವನ್ನು ಈ ಮೂಲಕ ಕೋರುತ್ತಾ ಈಗಾಗಲೇ ಕ್ಷೇತ್ರದಲ್ಲಿ ಸಾಮೂಹಿಕ ಚಂಡಿಕಾ ಹೋಮ, 108 ಕಾಯಿ, ಗಣಹೋಮ, ದೀಪೋತ್ಸವ ಹಾಗೂ ನವರಾತ್ರಿ ವಿಶೇಷ ಪೂಜೆಗಳು ನಡೆಯುತ್ತಿರುತ್ತವೆ. ತಾವು ದಯಮಾಡಿ ಶ್ರೀಕ್ಷೇತ್ರದ ನಿರ್ಮಾಣಕ್ಕೆ ಕೈ ಜೋಡೊಸಬೇಕಾಗಿ ನಮ್ರ ವಿನಂತಿ.

ಧನ ಸಹಾಯವನ್ನು ಚೆಕ್ ಅಥವಾ ಡಿ.ಡಿ ಮೂಲಕ ಸಿಂಡಿಕೇಟ್ ಬ್ಯಾಂಕ್‌ನವರ ಈ ಖಾತೆ ಸಂಖ್ಯೆಗೆ ಕಳುಹಿಸಬಹುದು, ತಾವು ತಮ್ಮ ಮೊಬೈಲ್ ನಂಬರ್ ಹಾಗೂ ವಿಳಾಸವನ್ನು ತಿಳಿಸಬೇಕಾಗಿ ವಿನಂತಿ.

**– ಅರುಣ್ ಕುಮಾರ್ ಜಡೆಮನೆ (8762525963, 9663019863)**

ಬ್ಯಾಂಕ್ ಖಾತೆಯ ವಿವರ :
**ಶ್ರೀ ಜಯದುರ್ಗಾ ಪರಮೇಶ್ವರಿ ದೇವಸ್ಥಾನ, ಕಡಬ**
**ಖಾತೆ ಸಂಖ್ಯೆ 01652200102709, ಐ.ಎಫ್.ಎಸ್.ಸಿ ಕೋಡ್ 0000165**
**ಸಿಂಡಿಕೇಟ್ ಬ್ಯಾಂಕ್, ಕಡಬ**

**ಈ ದೇವಾಲಯ ಹೆಚ್ಚಿನ ಮಾಹಿತಿಗಾಗಿ ಈ ಸಂಖ್ಯೆಗಳನ್ನು ಸಂಪರ್ಕಿಸಿ :**
ಬೆಂಗಳೂರು: ಕೆ. ಸಂತೋಷ್ ರಾವ್ (9538800020)
ಉಡುಪಿ : ಜಿ.ಕೆ. ಕೋಲ್ಪೆ (9449903002)
ಉಜಿರೆ : ಜಯಪ್ರಕಾಶ್ (8732131929)
ಮಂಗಳೂರು : ಸುರೇಶ್ ರಾವ್ ಎಮ್. (9511742362)
ಸುಳ್ಯ : ಪಾಲಚಂದ್ರ ವೈ.ವಿ (9480158558)

**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಪುಸ್ತಕ ಪರಿಚಯ : "ಗಣೇಶನ ಜನನ–ನಾನಾ ಕಥನ"

ವಿಮರ್ಶೆ : ಮೂಡುಬಿದಿರೆ ರಾಯೀರಾಜಕುಮಾರರಿಂದ

ಇತ್ತೀಚೆಗೆ ಬಿಡುಗಡೆಯಾದ ಮಾರ್ಪಳ್ಳಿ ಆರ್.ಮಂಜುನಾಥ್‌ರವರ ಪುಸ್ತಕ–ಗಣೇಶನ ಜನನ. ಶಿವಮೊಗ್ಗದ ಶ್ರೀ ಮಹಾ ಗಣಪತಿ ಪ್ರಕಾಶನ ಹಾಗೂ ಕಿನ್ನಿಗೋಳಿಯ ಗಾಯತ್ರೀ ಪ್ರಕಾಶನದವರ ಜಂಟಿ ಸಹಭಾಗಿತ್ವದಲ್ಲಿ ಮೂಡಿ ಬಂದಿದೆ. ಸ್ವತಃ ಕೃತಿಕಾರರು ಹೇಳಿಕೊಂಡಂತೆ ನಾನಾ ಪುರಾಣಗಳಲ್ಲಿರುವ ಗಣೇಶನಜನ್ಮ ವೃತ್ತಾಂತವನ್ನು ಒಟ್ಟಾಗಿ ಈ ಹೊತ್ತಗೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಒಂದೇ ಒಂದು ಅಕ್ಷರ ತಪ್ಪೂ ಇರದಂತೆ ಶಿವಮೊಗ್ಗದ ಜೋಯಿಸ್ ಬುಕ್ ಪ್ರಿಂಟರ್ಸ್‌ರವರು ಸುಂದರವಾಗಿ ಮುದ್ರಿಸಿದ್ದಾರೆ.

ಸರ್ವಜನ, ಸಾರ್ವಜನಿಕ ಹಾಗೂ ಪ್ರಥಮ ಪೂಜಿತ ಗಣಪತಿ ಎಲ್ಲರಿಗೂ ವಿಘ್ನ ನಿವಾರಕನಾಗಿದ್ದಾನೆ. ಅಂತಹ ವಿಶೇಷ ವ್ಯಕ್ತಿತ್ವದ ಗಣಪನ ಆಕಾರದಂತೆಯೇ ಆತನ ಜನನವೂ ಬಹು ಚರ್ಚಿತ, ವಿಚಿತ್ರವಾದ್ದು. ಅಂತಹ ವಿಶೇಷ ಚರ್ಚಿತ ಅಂಶಗಳ ಬಗ್ಗೆ ಪುರಾಣದ ಆಧಾರ ಸಹಿತವಾದ ಅಂಶಗಳನ್ನು ಸಂಗ್ರಹಿಸಿ ಲೇಖಕರು ಈ ಕೃತಿಯಲ್ಲಿ ನೀಡಿದ್ದಾರೆ. ಕೇವಲ 48 ಪುಟಗಳ ಕೃತಿಯಾದರೂ ಇದು ಸಂಗ್ರಹಯೋಗ್ಯ ಕೃತಿಯಾಗಿದೆ. ಇಲ್ಲಿ ಲೇಖಕರು ಬ್ರಹ್ಮ ವೈವರ್ತ, ಸ್ಕಂದ, ಸುಪ್ರಭೇದಾಗಮ, ಲಿಂಗ, ವಾಮನ, ಗಣೇಶ, ಶಿವ, ಪದ್ಮ, ವರಾಹ ಇತ್ಯಾದಿ ಎಲ್ಲ ಪುರಾಣಗಳೊಂದಿಗೆ ಶಿವ ರಹಸ್ಯದಿಂದಲೂ ಉದಾಹರಣೆಗಳನ್ನು ಉದ್ಧರಿಸಿ ಕೊಟ್ಟಿದ್ದಾರೆ.

ಪ್ರತಿಯೊಂದರಲ್ಲೂ ಘಟನೆಗಳು ಬೇರೆ ಬೇರೆಯಾದರೂ ಗಣೇಶ ಎಲ್ಲಾ ಕಡೆ ಅಗ್ರ ಪೂಜಿತನು. ಯಾರು ಯಾವ ರೂಪದಲ್ಲಿ, ಯಾವ ಮನೋಭಾವದಿಂದ ಯೋಚಿಸಿದರೂ, ಅದೇ ಮನೋಭಾವದ ಯೋಚನೆಯಂತೆ ಮಕ್ಕಳ ಜನನವಾಗುತ್ತದೆಂದು ಈ ಕಥೆಗಳು ಸ್ಫುರಿಸುತ್ತವೆ. ಇದು ವೈಜ್ಞಾನಿಕ ನಿಲುವೂ ಆಗಿದ್ದು ಇಂದಿಗೂ, ಮುಂದಿಗೂ ಸರಿ ಹೊಂದುವದಾಗಿದೆ. ಆದುದರಿಂದಲೇ ಇಂದಿಗೂ ಡಾಕ್ಟರುಗಳೂ ಸಹ ಗರ್ಭಿಣಿಯರನ್ನು ಬಹಳ ಜೋಪಾನವಾಗಿ ನೋಡಿ ಕೊಳ್ಳುವಂತೆಯೂ, ಅವರಿಗೆ ಬೇಸರ, ಹತಾಶೆ, ದುಃಖ ಉಂಟಾಗದಂತೆ ವರ್ತಿಸಬೇಕೆಂದೂ ಹೇಳುವುದು. ಏಕೆಂದರೆ ಗರ್ಭಿಣಿಯು ಎರಡು ಜೀವಗಳನ್ನು ಹೊಂದಿರುವದರಿಂದ ತಾಯಿಯ ಮನೋಭಾವ ಹುಟ್ಟುವ ಮಗುವಿನಲ್ಲೂ ಮೂಡುತ್ತದೆನ್ನುವ ವೈಜ್ಞಾನಿಕ ಕಾರಣ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಮಾರ್ಪಳ್ಳಿ ಆರ್. ಮಂಜುನಾಥ್‌ರವರು ಒಂದು ಉತ್ತಮ, ವಿಚಾರ ಪ್ರಚೋದಿತ–ಸಂಗ್ರಾಹ್ಯ ಕೃತಿಯನ್ನು ಸಾಹಿತ್ಯ ಪ್ರಪಂಚಕ್ಕೆ ನೀಡಿದ್ದಾರೆ. ಅವರ ಶ್ರಮ, ಆಸಕ್ತಿ, ಗಣೇಶನ ಬಗೆಗೆ ತಿಳಿಸಬೇಕೆಂಬ ತುಡಿತನಿಜಕ್ಕೂ ಸ್ತುತ್ಯರ್ಹ. ಅವರಿಗೆ, ಅವರ ಸಾಹಿತ್ಯ ಕೃಷಿಗೆ ಸದಾ ಗಣೇಶನ ಕೃಪೆ ಇರಲೆಂದು ಸದಾ ಶುಭ ಹಾರೈಕೆ.

**ಮಂಗಳಮುಖಿ** (ಮುಂದುವರಿದುದು)

ಸದಾ ಅಭದ್ರತೆಯ
ಅನಿಶ್ಚಿತತೆಯ ಬದುಕಂತೆ...!
TO BE OR NOT TO BE
ಎಂಬ ಅಂಗ್ಲ ಗಾದೆಯಂತೆ...!

ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ, ತಲೆಗೊಂದು ಸೂರು,
ಇವುಗಳಲ್ಲಿ ಅನುದಿನದ ತೊಂದರೆಗಳು...!
ಕಳಂಕ ತಾರತಮ್ಯಗಳೇ,
ನನ್ನ ನಿಜವಾದ ಸಮಸ್ಯೆಗಳು...!!

ಬೇಡ ಖಂಡಿತ ನಿಮ್ಮ
ಕರುಣೆ, ಅನುಕಂಪ ನನಗೆ...!
ಬೇಕು ಕೌಟುಂಬಿಕ, ಸಾಮಾಜಿಕ
ಸ್ವೀಕೃತಿ, ಬೆಂಬಲ ನನಗೆ...!!

ಲೈಂಗಿಕ ಹಾರ್ಮೋನುಗಳಿಂದ
ಉಂಟಾಗುವ ಬದಲಾವಣೆ...!
ವಿಕೃತಿಯಲ್ಲವಿದು,
ಪ್ರಕೃತಿ ಸಹಜ ಚಟುವಟಿಕೆ...!!

ಗರ್ಭಕೋಶವಿಲ್ಲ, ಮಾಸಿಕ ಋತುಸ್ರಾವವಿಲ್ಲ,
ಹೆರಿಗೆ ಸಾಧ್ಯವೇ ಇಲ್ಲ–ಆದರೂ ನಾನು ಹೆಣ್ಣು...!
ಜೀವನದ–ಹತ್ತು ಹಲವು
ವಿರೋಧಾಭಾಸಗಳಲ್ಲಿ ಇದೂ ಒಂದು...!!

ಮಂಗಳಮುಖಿಯಾದರೇನು? –
ನಾನೂ ಮಾನವಳು
ನನಗೂ ಅನ್ವಯಿಸುತ್ತದೆ,
ಮಾನವ ಹಕ್ಕುಗಳು...!!

ಬಿಡಿಸಬಲ್ಲೆ–ಕಲಾವಿದರಿಗಿಂತಲೂ
ಮಿಗಿಲಾಗಿ ರಂಗೋಲಿ
ಮಾಡಬಲ್ಲೆ–ಹೇಮಾಮಾಲಿನಿ, ಮಾಧುರಿ ದೀಕ್ಷಿತ್‌ರನ್ನೂ
ಮೀರಿಸುವಂತೆ ನೃತ್ಯ...!!


ವಿಧಿಯ ಕ್ರೌರ್ಯವೆನ್ನಿ, ಕರ್ಮಬಂಧನವೆನ್ನಿ,
ನೋಡಿ ಸ್ವಾಮಿ ನಾನಿರೋದೇ ಹೀಗೆ...!
ನನ್ನ ದೇಹ, ನನ್ನ ಹಕ್ಕು ಎಂಬ
ಮಹಿಳಾವಾದದ ಸಿದ್ಧಾಂತದ ಹಾಗೆ...!!

ಶತ ಶತಮಾನಗಳಿಂದ ಶೋಷಣೆಗೊಳಗಾಗಿ,
ಅಜ್ಞಾನ, ಅಂಧಕಾರದಲ್ಲಿದ್ದವಳು...!
ಇದೀಗ ಜ್ಞಾನದ ಬೆಳಕಿಗಾಗಿ,
ಸಮಾಜದ ಮುಖ್ಯ ವಾಹಿನಿಗಾಗಿ
ಸೇರುವ ಹಂಬಲವುಳ್ಳವಳು...!!

ಪ್ರಭು ಶ್ರೀರಾಮಚಂದ್ರನ
ಕೃಪಾಶೀರ್ವಾದ...!
ಆಳುವವು ಭಾರತವನ್ನು
ಮುಂದೊಂದು ದಿನ...!

(ಮುಗಿಯಿತು) –ಮಲ್ಲಿಕ್, ಉಳಿಯಾರು


## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು





## ಶುಭ ವಿವಾಹ

ಕಾಪುವಿನ ಶ್ರೀಮತಿ ಹಾಗೂ ಶ್ರೀ ಯು. ಅಶೋಕ್ ಕುಮಾರ್ ಇವರ ಪುತ್ರ **ಅಜಯ್** ಮತ್ತು ಶ್ರೀಮತಿ ಹಾಗೂ ಶ್ರೀ ಗೋಪಾಲಕೃಷ್ಣ ರಾವ್‌ರವರ ಪುತ್ರಿ **ದೀಪಿಕಾ** ಇವರ ವಿವಾಹವು **ತಾ.13.10.2019**ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸದನದಲ್ಲಿ ನೆರವೇರಿತು.

## ಗೃಹಪ್ರವೇಶ

ಹೆಬ್ರಿಯ ಶ್ರೀ ವೈ. ವಿಶ್ವನಾಥ ರಾವ್ ಹಾಗೂ ಶ್ರೀಮತಿ ಸರಸ್ವತಿ ದಂಪತಿಗಳ ಪುತ್ರ ಶ್ರೀ ವಿಕಾಸ್ ರಾವ್ ಮತ್ತು ಶ್ರೀಮತಿ ಶುಭಾ ದಂಪತಿಗಳು ಉಜಿರೆಯಲ್ಲಿ ನಿರ್ಮಿಸಿದ ನೂತನ ನಿವಾಸ **ಸಮೃದ್ಧಿ** ಇದರ ಗೃಹ ಪ್ರವೇಶವನ್ನು **ತಾ.21–10–2019**ರಂದು ನೆರವೇರಿಸಿದರು. ಇದೇ ಸಂದರ್ಭದಲ್ಲಿ ತನ್ನ ಮಗಳು **"ಆನ್ವಿ"**ಯ ನಾಮಕರಣ ಸಮಾರಂಭವನ್ನೂ ನೆರವೇರಿಸಿದರು.

**** ****

ಕಬ್ಬಿನಾಲೆ ಕುಚ್ಚೂರು ಶ್ರೀ ಕೆ. ಪ್ರಭಾಕರ ಹೆಬ್ಬಾರ್‌ರವರು ಹೆಬ್ರಿಯ ವಿನೂನಗರದಲ್ಲಿ ನಿರ್ಮಿಸಿದ ನೂತನ ನಿವಾಸ **ದ್ವಾರಕಾ** ಇದರ ಗೃಹ ಪ್ರವೇಶವನ್ನು **ತಾ.21–10–2019**ರಂದು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಪವಿತ್ರಾ ಹಾಗೂ ಶ್ರೀ ಆದಿತ್ಯ ಉಬರಳೆ ಇವರ ಮಗಳ ನಾಮಕರಣ ಸಮಾರಂಭವನ್ನೂ ನೆರವೇರಿಸಿದರು.

## ನಾಮಕರಣ

ಬೆಂಗಳೂರಿನ ಶ್ರೀ ಹೇಮಂತ್ ಹಾಗೂ ಅಮೃತಾ ದಂಪತಿಗಳು ತಮ್ಮ ಪುತ್ರ **"ವೈಶಾಖ್"**ನ ನಾಮಕರಣ ಸಮಾರಂಭವನ್ನು **ತಾ.03–11–2019**ರಂದು ಪಿಲಿಕುಳದ ಬಳಿಯ ಶ್ರೀ ರಾಮ ಭಜನಾ ಮಂದಿರದಲ್ಲಿ ನೆರವೇರಿಸಿದರು.

## ಶುಭಜನನ

ಕಾರ್ಕಳದಲ್ಲಿ ನೆಲೆಸಿರುವ ಬೆಳ್ಮಣ್ಪಾಡಿಯ ವಿಘ್ನೇಶ್ ಕುಮಾರ್ ಮತ್ತು ಅಂಕಿತಾ ದಂಪತಿಗಳಿಗೆ **ತಾ.8–10–2019**ರಂದು ಹೆಣ್ಣು ಮಗುವಿನ ಜನನವಾಗಿರುತ್ತದೆ.

## ನಿಧನ



**ಶ್ರೀಮತಿ ಸೀತಮ್ಮಹೆಬ್ಬಾರ್**

ಬೈಲುಮನೆ ಮುದ್ರಾಡಿಯ ಶ್ರೀಮತಿ ಸೀತಮ್ಮಹೆಬ್ಬಾರ್ ಇವರು 17.10.2019ರಂದು ನಿಧನ ಹೊಂದಿದರು.

**** ****

**ಶ್ರೀಮತಿ**

ನೆರುಲ್‌ನಲ್ಲಿ ವಾಸವಾಗಿದ್ದ ಶ್ರೀಮತಿ ಪಾದೆಬೆಟ್ಟು ಶ್ರೀಮತಿಯವರು ತಾ.03.11.2019ರಂದು ನಿಧನ ಹೊಂದಿದರು. ಇವರು ಪಾದೆಬೆಟ್ಟು ಶ್ರೀಪತಿರಾಯರ ಧರ್ಮಪತ್ನಿ ಹಾಗೂ ಕಾಂತಾವರ ಲಕ್ಷ್ಮೀನಾರಾಯಣ ರಾಯರ ಪುತ್ರಿ. ಇವರಿಗೆ 78 ವರ್ಷ ಪ್ರಾಯವಾಗಿತ್ತು.

**** ****

**ಶ್ರೀಮತಿ ಮಂಜುಳಾ ರಮೇಶ ಹೆಬ್ಬಾರ್**

ಮುಂಬಯಿ ಥಾನೆ ನಿವಾಸಿ ಶ್ರೀಮತಿ ಮಂಜುಳಾ ರಮೇಶ್ ಹೆಬ್ಬಾರ್ ತನ್ನ 47ನೆಯ ವಯಸ್ಸಿನಲ್ಲಿ ತಾ.19.10.2019ರಂದು ನಿಧನ ಹೊಂದಿದರು.

**** ****

**ಕೊಕ್ರಾಡಿ ಬಾಲಕೃಷ್ಣರಾಯರು**



ಬೆಳ್ತಂಗಡಿ ತಾಲೂಕು ಮಿತ್ತಬಾಗಿಲು ಕಿಲ್ಲೂರು ಗ್ರಾಮದ ನಿವಾಸಿ ಶ್ರೀ ಕೊಕ್ರಾಡಿ ಬಾಲಕೃಷ್ಣರಾಯರು ತಾ.19.10.2019ರಂದು ನಿಧನ ಹೊಂದಿದರು. ಇವರ ಪುತ್ರ ದಿ. ಉದಯಚಂದ್ರ ರಾವ್‌ರವರು ನಮ್ಮ ಸಂಘದ ಯುವವೇದಿಕೆಯ ಸ್ಥಾಪಕ ಸದಸ್ಯರಾಗಿದ್ದು ಅವರ ನೆನಪಿನಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಉದಯಚಂದ್ರ ಪುರಸ್ಕಾರವನ್ನು ನೀಡಲಾಗುತ್ತಿದೆ.

**** ****

**ಶ್ರೀಮತಿ ಭೀಮಾವತಿ ಅಧಿಕಾರಿ**

ಮೈಸೂರಿನ ಶ್ರೀಮತಿ ಭೀಮಾವತಿ ಅಧಿಕಾರಿಯಯವರು ತಾ.12.10.2019ರಂದು ತನ್ನ 74ನೆಯ ವಯಸ್ಸಿನಲ್ಲಿ ನಿಧನ ಹೊಂದಿದರು.

**** ****

**ಡಾ ಹೆಚ್ ಶಿವಚಂದ್ರ ಭಟ್**



ಹಳೆಯಂಗಡಿಯ ಪ್ರಸಿದ್ಧ ವೈದ್ಯರಾದ ಡಾ ಹೆಚ್ ಶಿವಚಂದ್ರ ಭಟ್ ತನ್ನ ಅರವತ್ತನೆಯ ವಯಸ್ಸಿನಲ್ಲಿ ತಾ.12.10.2019ರಂದು ನಿಧನ ಹೊಂದಿದರು. ಇವರು ಹಳೆಯಂಗಡಿಯ ಪ್ರಸಿದ್ಧ ಆಯುರ್ವೇದ ಪಂಡಿತರಾದ ದಿ. ಸುಬ್ರಾಯ ಭಟ್ ಇವರ ಪುತ್ರ.

**** ****

**ಶ್ರೀ ಹೆಚ್ ವಿದ್ಯಾಸಾಗರ ರಾವ್**


ಕಂಕನಾಡಿಯ ನಿವಾಸಿ ಶ್ರೀ ಹೆಚ್ ವಿದ್ಯಾಸಾಗರ ರಾವ್ ತನ್ನ 64ನೆಯ ವಯಸ್ಸಿನಲ್ಲಿ ತಾ.16.10.2019ರಂದು ನಿಧನ ಹೊಂದಿದರು

**** ****


**ಶ್ರೀ ಕೇದಗೆ ಅರುಣ್ ಕುಮಾರ್**

ಶ್ರೀ ಕೇದಗೆ ಅರುಣ್ ಕುಮಾರ್ ರವರು ತಾ.01.10.2019ರಂದು ನಿಧನ ಹೊಂದಿದರು.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**



ಕಾರ್ಯಕಾರಿಣಿ ಮಂಡಳಿ ಸದಸ್ಯರು

**D. K. District Used Vehicle Dealers & Agents Association (R.), Mangalore**
**Flat No. 103, Deepa Residency, Near Preethi Apartment**
**Kodiyalguttu West, Kodiyalbail, MANGALORE - 575 003**
Mob. : 9845644489, 9964236997 E-mail : laxmiprasad5010@gmail.com

## ಪುಸ್ತಕ ಬಿಡುಗಡೆ



ಸಾಹಿತಿ ರಾಧಾಕೃಷ್ಣ ಉಳಿಯತ್ತಡ್ಕ ಅವರು ಬರೆದ ಕಾಸರಗೋಡಿನ ಬಿ.ಇ.ಎಂ. ಹೈಸ್ಕೂಲ್ ಹಾಗೂ ಕೂಡ್ಲು ಶ್ರೀ ಗೋಪಾಲಕೃಷ್ಣ ಹೈಸ್ಕೂಲಿನಲ್ಲಿ ಚಿತ್ರ ಕಲಾ ಅಧ್ಯಾಪಕರ ಜೀವನ – ಸಾಧನೆ ಕುರಿತಾದ “ಅಭಿಜಾತ ಕಲಾವಿದ ಗೋಪಾಲಕೃಷ್ಣ ಶ್ಯಾನುಭಾಗ” ಎಂಬ ಕೃತಿಯನ್ನು ಮೂಡುಬಿದಿರೆಬಳಿಯ ಕಾಂತಾವರ ಕನ್ನಡ ಸಂಘ ಆಯೋಜಿಸಿದ ಕನ್ನಡ ರಾಜ್ಯೋತ್ಸವ–ಕಾಂತಾವರ ಉತ್ಸವ ಕಾರ್ಯಕ್ರಮದಲ್ಲಿ ಸಾಹಿತಿ ನರೇಂದ್ರ ರೈ ದೇರ್ಲ ಅವರು ಬಿಡುಗಡೆಗೊಳಿಸಿದರು. ಸತೀಶ್ ಚಪ್ಪರಿಕೆ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಶ್ರೀಕುಮಾರ್ ಬೆಕ್ಕೇರಿ ಮುಖ್ಯ ಅತಿಥಿಯಾಗಿದ್ದರು. ಸಂಘದ ಸ್ಥಾಪಕ ಅಧ್ಯಕ್ಷ ಡಾ॥ ನಾ. ಮೊಗಸಾಲೆ, ಸದಾನಂದ ನಾರಾವಿ, ವಿಠಲ ಬೇಲಾಡಿ, ನಂದಳಿಕೆ ಬಾಲಚಂದ್ರರಾವ್, ಜನಾರ್ಧನ ಭಟ್, ಕು.ಗೋ.ಬಿ.ಎ. ಆಚಾರ್ಯ ಮೊದಲಾದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಾಹಿತಿ ರಾಧಾಕೃಷ್ಣ ಉಳಿಯತ್ತಡ್ಕ ಹಾಗೂ ಕೃತಿಗೆ ಮಾಹಿತಿ ಒದಗಿಸಿದ ಸಂಪನ್ಮೂಲ ವ್ಯಕ್ತಿ ಶಾನ್, ಕಾಸರಗೋಡು ಅವರನ್ನು ಕಾಂತಾವರ ಕನ್ನಡ ಸಂಘದ ವತಿಯಿಂದ ಗೌರವಿಸಲಾಯಿತು.

## ಪ್ರತಿಭಾ ಪುರಸ್ಕಾರ



ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ ಇದರ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿ ಗಳಿಸಿದ ವಿದ್ಯಾರ್ಥಿಗಳನ್ನು 20–10–2019ರಂದು ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಪುರಸ್ಕರಿಸಲಾಯಿತು.

## ಎಂ.ವ್ಯಾಸ ಸ್ಮಾರಕ ಕಥಾ ಸ್ಪರ್ಧೆಯ ಪ್ರಶಸ್ತಿ ಪ್ರದಾನ




ಕಾಸರಗೋಡಿನಲ್ಲಿ ಜರಗಿದ ಎಂ.ವ್ಯಾಸ ಸ್ಮಾರಕ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನಕ್ಕೆ ವಿಜಯಲಕ್ಷ್ಮೀ ಇವರ "ಹಾರಿ ಮರಳಿದ ಹಕ್ಕಿ", ದ್ವಿತೀಯ ಬಹುಮಾನಕ್ಕೆ ಡಾ। ವೈ.ಸುದರ್ಶನ್ ರಾವ್‌ರವರ "ಗುಲಾಬ್ ಜಾಮೂನ್", ಬೆಲ್ಲಾಲ ಗೋಪಿನಾಥ ರಾಯರ "ಅಂತ", ಪ್ರೇಮ ಈಶ್ವರ ಚಂದ್ರ ಇವರ "ತೃಪ್ತಿ" ಆಯ್ಕೆಯಾಗಿದ್ದವು. ಕಾಸರಗೋಡು ಸಂಘದ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಶ್ರೀ ಬಿ.ಕೆ ದೇವರಾವ್ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ



ಬೆಳ್ತಂಗಡಿ ಮಿತ್ತಬಾಗಿಲು ಗ್ರಾಮದ ಹಿರಿಯ ಕೃಷಿಕ ಶ್ರೀ ಬಿ.ಕೆ. ದೇವರಾವ್ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ ಲಭಿಸಿದೆ. ಇವರು 1965ರಿಂದ ಸುಮಾರು 170 ತರಹದ ಭತ್ತದ ತಳಿಗಳನ್ನು ಬೆಳೆಯುತ್ತಾ ಸಂರಕ್ಷಿಸಿಕೊಂಡು ಬಂದಿದ್ದಾರೆ. ಇವರು 2017ರಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿಯವರಿಂದಲೂ ರಾಷ್ಟ್ರಪತಿ ಭವನದಲ್ಲಿ ಸಮ್ಮಾನಿತರಾಗಿದ್ದರು. ಇವರಿಗೆ ಉಡುಪಿ ಸಂಘದ ಅಭಿನಂದನೆಗಳು.

## ಶ್ರೀ ದಯಾನಂದರಾವ್ ಇವರಿಗೆ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ



ಕುಂದಾಪುರ ಸಂಘದ ಕಾರ್ಯದರ್ಶಿ ಕೃಷಿಕ ಸಮಾಜಸೇವಕ ಶ್ರೀ ದಯಾನಂದ ರಾವ್ ಈ ಬಾರಿಯ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ಶಂಕರನಾರಾಯಣದಲ್ಲಿ ಹೈನುಗಾರಿಕಾ ಸಹಕಾರಿ ಸಂಘದ ಕಾರ್ಯದರ್ಶಿ. ಇವರು ಹಸುಗಳ ಮಿಶ್ರತಳಿಯ ಅಭಿವೃದ್ಧಿಯಲ್ಲಿ ಪರಿಣಿತರು. ಯಕ್ಷಗಾನ ನಾಟಕ ಸಾಹಿತ್ಯ ಸಮಾಜಸೇವೆ ಹೀಗೆ ಬಹು ಆಯಾಮದ ವ್ಯಕ್ತಿತ್ವ ಇವರದು. ಅವರಿಗೆ ಉಡುಪಿ ಸಂಘದ ಅಭಿನಂದನೆಗಳು.



## ರಂಗ ಸಮಾಜದ ಸದಸ್ಯರಾಗಿ ನೇಮಕ

ಸುಳ್ಯದ ಬಹುಆಯಾಮದ ಕಲಾವಿದ ಶ್ರೀ ಜೀವನ್ ರಾಮ್ ಸುಳ್ಯ ಇವರನ್ನು ಕರ್ನಾಟಕ ಸರಕಾರವು ರಂಗ ಸಮಾಜದ ಸದಸ್ಯರನ್ನಾಗಿ ನೇಮಿಸಿದೆ. ಇವರಿಗೆ ಉಡುಪಿ ಸಂಘದ ಅಭಿನಂದನೆಗಳು.

## ವಿದ್ಯಾರ್ಥಿ ವೇತನ ವಿತರಣೆ



ಶ್ರೀ ಬೆಳ್ಳೆ ರವೀಂದ್ರನಾಥ್‌ರವರು ಪ್ರಾಯೋಜಿಸಿದ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮವು ತಾ.05–10–2019ರಂದು ಬೆಳ್ಳೆಯ ಸೈಂಟ್ ಲಾರೆನ್ಸ್ ಪದವಿಪೂರ್ವ ಕಾಲೇಜಿನಲ್ಲಿ ಜರಗಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಣಿಪಾಲ ಎಮ್.ಐ.ಟಿ. ತಾಂತ್ರಿಕ ಸಂಸ್ಥೆಯ ಅಸಿಸ್ಟೆಂಟ್ ಪ್ರೊಫೆಸರ್ ಸಿಲೆಕ್ಷನ್ ಗ್ರೇಡ್ ಡಾ.ವಿದ್ಯಾ ಎಸ್.ರಾವ್‌ರವರು ಪ್ರೌಢಶಾಲೆಯ 12, ಪದವಿಪೂರ್ವ ಕಾಲೇಜಿನ 8 ಸಾಧಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಿಸಿದರು. ವಿದ್ಯಾರ್ಥಿ ವೇತನದ ಪ್ರಾಯೋಜಕರಾದ ಶ್ರೀ ರವೀಂದ್ರನಾಥ ರಾವ್ ಬೆಳ್ಳೆ, ಶ್ರೀಮತಿ ಮಾಲಿನಿ ಆರ್.ಬೆಳ್ಳೆ, ಹಿರಿಯ ಶಿಕ್ಷಕರಾದ ಶ್ರೀ ಸದಾನಂದ ರಾವ್ ಬೆಳ್ಳೆ, ಶ್ರೀ ಕರುಣ್ ಬೆಳ್ಳೆ ಹಾಗೂ ಸಂಸ್ಥೆಯ ಪ್ರಾಂಶುಪಾಲರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಶ್ರೀ ಮಂಜುನಾಥ ಹೆಬ್ಬಾರ್‌ರವರ ಮನೆಯಲ್ಲಿ ಗೋಪೂಜೆ



ಗೋಸೇವಾ ಟ್ರಸ್ಟ್ ಆರೂರು ಇದರ ವತಿಯಿಂದ ದೀಪಾವಳಿಯ ಸಂದರ್ಭದಲ್ಲಿ ಶ್ರೀ ಮಂಜುನಾಥ ಹೆಬ್ಬಾರ್‌ರವರ ನಿವಾಸದಲ್ಲಿ ಗೋಪೂಜೆ ನಡೆಯಿತು. ಆ ಸಂದರ್ಭದಲ್ಲಿ ಉಡುಪಿಯ ಖ್ಯಾತ ಮಕ್ಕಳ ತಜ್ಞ ವೈದ್ಯರಾದ ಡಾ। ದಿನೇಶ್‌ರವರು ಆಗಮಿಸಿದ್ದರು. ನಮ್ಮ ಸಂಘದ ಕೋಶಾಧಿಕಾರಿಗಳಾದ ಶ್ರೀ ಜಯರಾಮ ರಾವ್‌ರವರು ಹತ್ತು ಸಾವಿರ ರೂಗಳ ದೇಣಿಗೆಯನ್ನು ನೀಡಿದರು.

With Best Compliments From :



## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ನಾಡ ಹಬ್ಬ"



ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರಿನಲ್ಲಿ ತಾ.20.10.2019ರ ರವಿವಾರದಂದು "ನಾಡಹಬ್ಬ"ವನ್ನು ವಿಜ್ರಂಭ್ರಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ ವಿವಿಧ ಪಾರಾಯಣಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ ಛದ್ಮವೇಷ, ಚಿತ್ರ ಬಿಡಿಸುವ ಹಾಗೂ ಹುಲಿಕುಣಿತ ಸ್ಪರ್ಧೆಗಳು ನಡೆಯಿತು. ತೀರ್ಪುಗಾರರಾಗಿ ಶ್ರೀ ಗೋಪಿನಾಥ್ ರಾವ್ ಹಾಗೂ ಶ್ರೀಮತಿ ರಾಧಾಮುರಳೀಧರ್ ಸಹಕರಿಸಿದರು. ಚಿತ್ರ ಬಿಡಿಸುವ ಸ್ಪರ್ಧೆಯನ್ನು ಶ್ರೀ ರಘುವೀರ್ ಪೆಡೂರ್ ಮತ್ತು ಶ್ರೀ ಕಾರ್ತಿಕ್ ಕುಡುಪು ನಡೆಸಿದರು. ಬಳಿಕ ದಿ| ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನದ ವತಿಯಿಂದ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ವನ್ನು ಶ್ರೀ ಕೆ. ಸದಾಶಿವ ಶಾಸ್ತ್ರಿ ಹಾಗೂ ಶ್ರೀಮತಿ ಸೌಭದ್ರಾ ಶಾಸ್ತ್ರಿ ನಿರ್ವಹಿಸಿದರು. ಬೋಜನದ ಬಳಿಕ ಶ್ರೀ ಸಭಾದ ಸದಸ್ಯರಿಂದ ಶ್ರೀ ಸಂಜಯ್ ಕುಮಾರ್ ಪಲಿಮಾರ್ ನಿರ್ದೇಶನದಲ್ಲಿ "ಪ್ರಮಿಳಾರ್ಜುನ ಮತ್ತು ವೀರ ಬಭ್ರುವಾಹನ"ಎಂಬ ಯಕ್ಷಗಾನ ಪ್ರದರ್ಶಿಸಲ್ಪಟ್ಟಿತು. ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪಾವತಿ ಶ್ರೀನಿವಾಸ್, ಡಾ| ಜಯಲಕ್ಷ್ಮೀ, ಯುವ ವೇದಿಕೆಯ ಶ್ರೀ ಅನಿಲ್ ನೆಲ್ಲಿಕುಂಜೆ, ಶ್ರೀ ಸುರೇಶ್ ಕಡಬ ಕಾರ್ಯಕ್ರಮ ಸಂಯೋಜಿಸಿದರೆ, ಶ್ರೀಸಭಾದ ಕೋಶಾಧಿಕಾರಿ ಶ್ರೀ ಪಿ.ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಧನ್ಯವಾದ, ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

## ಶ್ರೀ ಎಂ.ಕೆ. ಕೃಷ್ಣಯ್ಯರವರಿಗೆ ಸನ್ಮಾನ




ಕರ್ನಾಟಕ ಅಂಚೆ ವೃತ್ತದ ವತಿಯಿಂದ ಮಂಗಳೂರು ನಗರದ ಎಂ.ಜಿ. ರಸ್ತೆಯ ಡಾ| ಟಿ.ಎಂ.ಎ.ಪೈ ಕನ್ವೆಂಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ 12 ನೇ ಅಂಚೆ ಚೀಟಿ ಪ್ರದರ್ಶನ 'ಕರ್ನಾಪೆಕ್ಸ್-2019' ನಲ್ಲಿ ಅಕ್ಟೋಬರ್ 13 ರಂದು ನಡೆದ ಪರಿಸರ ದಿನಾಚರಣೆ ಕಾರ್ಯಕ್ರಮ ಸಂಪನ್ನಗೊಂಡಿತು. ಪರಿಸರ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಕರಾವಳಿಯ ಪರಿಸರಕ್ಕೆ ಸಂಬಂಧಿಸಿದ 'ಮಟ್ಟುಗುಳ್ಳ' 'ಶಂಕರಪುರ ಮಲ್ಲಿಗೆ' ಮತ್ತು 'ವಿಶೇಷ ಕಪ್ಪೆಯ ಪ್ರಭೇದ' ಸಂಬಂಧಿಸಿದ ವಿಶೇಷ ಅಂಚೆ ಲಕೋಟೆಗಳನ್ನು ಈ ಸಂದರ್ಭದಲ್ಲಿ ಅನಾವರಣ ಮಾಡಲಾಯಿತು. ಅಂಚೆ ಇಲಾಖೆ ಹೊರತಂದ 'ಅಂಚೆಚೀಟಿಯಲ್ಲಿ ಕನ್ನಡ ಅಕ್ಷರಮಾಲೆ' ಪುಸ್ತಕವನ್ನು ಮಂಗಳೂರಿನ ಜಿಲ್ಲಾಧಿಕಾರಿ ಬಿಡುಗಡೆ ಮಾಡಿದರು. ಹಿರಿಯ ಅಂಚೆ ಚೀಟಿ ಸಂಗ್ರಹಕಾರ ರಾದ ಎಂ.ಕೆ. ಕೃಷ್ಣಯ್ಯ ಅವರನ್ನು ಸನ್ಮಾನಿಸಲಾಯಿತು. ಮೂರು ವಿಶೇಷ ಅಂಚೆ ಲಕೋಟೆಗಳನ್ನು ಮತ್ತು 'ಅಂಚೆಚೀಟಿಯಲ್ಲಿ ಕನ್ನಡ ಅಕ್ಷರಮಾಲೆ' ಪುಸ್ತಕ ಇವುಗಳ ವಿನ್ಯಾಸ ಮತ್ತು ಸಂಗ್ರಹ ಎಂ.ಕೆ. ಕೃಷ್ಣಯ್ಯ ಇವರು ಮಾಡಿರುವವರು. ವಿಶೇಷ ಕಪ್ಪೆಯ ಪ್ರಭೇದವನ್ನು ಕಂಡುಹಿಡಿದಿರುವವರು ನಮ್ಮವರೇ ಆದ ನಿವೃತ್ತ ಪ್ರೊ. ಹರೀಶ್ ಜೋಶಿಯವರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ " ದೀಪಾವಳಿ"



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.1-11-2019ರಂದು ದೀಪಾವಳಿ ಆಚರಣೆಯನ್ನು ಭಕ್ತಿಪೂರ್ವಕ ಹಾಗೂ ಸಂಭಮದಿಂದ ಆಚರಿಸಲಾಯಿತು ಶ್ರೀ ಸಭಾದ ಸದಸ್ಯರ ಭಜನಾ ಕಾರ್ಯಕ್ರಮ ಬಳಿಕ ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೇದಿಗೆ, ಪದಾಧಿಕಾರಿಗಳು, ನಿರ್ದೇಶಕರು, ಯುವ ವೇದಿಕೆ ಪದಾಧಿಕಾರಿಗಳು, ಮಹಿಳಾ ವೇದಿಕೆಯ ಪದಾಧಿಕಾರಿಗಳು, ಮತ್ತು ಸದಸ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲನೆ ಮಾಡಲಾಯಿತು. ಶ್ರೀ ನಾಗರಾಜ್ ಶರ್ಮರವರು ಶ್ರೀ ರಘುವೀರ್ ಪೆಡೂರ್‌ರವರ ಸಹಕಾರದೊಂದಿಗೆ ದೀಪದ ಮುಂಭಾಗದಲ್ಲಿ ರಚಿಸಿದ ರಂಗೋಲಿಯು ಸರ್ವರ ಮೆಚ್ಚುಗೆಗೆ ಪಾತ್ರವಾಯಿತು. ದೀಪಸ್ತುತಿಯನ್ನು ಶ್ರೀಮತಿ ಉಷಾ ನಟರಾಜ್ ಹಾಡಿದರು. ಶ್ರೀಮತಿ ಮಂಜುಳಾ ಮುರಳಿಧರ್, ಶ್ರೀಮತಿ ಸುಜಾತಾ ಬೆಳ್ಳೆ, ಶ್ರೀಮತಿ ಶೀತಲ್ ಲಕ್ಷ್ಮೀ ಸ್ತುತಿಯನ್ನು ನಡೆಸಿದರು. ಶ್ರೀಮತಿ ಸ್ನೇಹಲತಾ ದಿವಾಕರ್ "ತುಳಸಿದಳ"ದ ಮಹತ್ವವನ್ನು ತಿಳಿಸಿದರು. ಶ್ರೀ ಸಭಾದ ಕಾರ್ಯದರ್ಶಿ ವಿವಿಧ ಪಾರಾಯಣಗಳ ಅರ್ಥ, ಲಾಭಗಳ ಬಗ್ಗೆ ಉಪನ್ಯಾಸ ನೀಡಿದರು. ಬಳಿಕ ವಿನೋದಾತ್ಮಕ ಆಟಗಳು, ಸಾಂಪ್ರದಾಯಕ ಉಡುಗೆ ಸ್ಪರ್ಧೆ, ವಿವಿಧ ವಿಭಾಗಗಳಲ್ಲಿ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೈಯಕ್ತಿಕ ನೃತ್ಯಗಳು ಹಾಗೂ ಶ್ರೀಮತಿ ಅನುರಾಧಾ ರಾವ್ ನಿರ್ದೇಶನದಲ್ಲಿ 24 ಕಲಾವಿದರ ತಂಡದಿಂದ ದೀಪಾವಳಿ ಹಾಗೂ ರಾಜ್ಯೋತ್ಸವ ವೈಭವವನ್ನು ನೃತ್ಯದ ಮೂಲಕ ಪ್ರಸ್ತುತ ಪಡಿಸಲಾಯಿತು. ಮಹಿಳಾ ವೇದಿಕೆಯ ಶ್ರೀಮತಿ ಕುಸುಮಾ ನವೀನ್ ಕುಮಾರ್, ಶ್ರೀಮತಿ ಪುಷ್ಪವತಿ ಶ್ರೀನಿವಾಸ್, ಡಾ. ಜಯಲಕ್ಷ್ಮೀ, ಯುವ ವೇದಿಕೆಯ ಶ್ರೀ ಮನೀಶ್ ರಾವ್, ಶ್ರೀ ಸುರೇಶ್ ಕಡಬ ವ್ಯವಸ್ಥೆಗಳಲ್ಲಿ ಸಹಕರಿಸಿದರು. ಶ್ರೀ ಸಭಾದ ಕೋಶಾಧಿಕಾರಿ ಶ್ರೀ ಪಿ.ಶ್ರೀಕಾಂತ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಬಹುಮಾನ ವಿತರಣೆ, ಧನ್ಯವಾದ, ದಾಂಡಿಯಾ ನೃತ್ಯದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಎನ್.ಎಸ್.ಎಸ್. ವಿಭಾಗಾಧಿಕಾರಿಯಾಗಿ ನಿಯೋಜನೆ



ತನ್ನ ಉತ್ತಮ ಚಟುವಟಿಕೆಗಳಿಂದ ರಾಜ್ಯ ಪುರಸ್ಕಾರ ಪಡೆದ ಶ್ರೀಮತಿ ಸವಿತಾ ಎರ್ಮಾಳ್ ಇವರು ಸರ್ಕಾರಿ ಪದವಿ ಪೂರ್ವ ಕಾಲೇಜು ಬ್ರಹ್ಮಾವರದಲ್ಲಿ ಆಂಗ್ಲಭಾಷಾ ಉಪನ್ಯಾಸಕಿಯಾಗಿದ್ದು, ಎನ್.ಎಸ್.ಎಸ್. ಯೋಜನಾಧಿಕಾರಿಯಾಗಿ ಕಳೆದ ಒಂಬತ್ತು ವರ್ಷಗಳಿಂದ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಸ್ವಯಂಸೇವಕರಿಂದ ಶೌಚಾಲಯ ನಿರ್ಮಾಣ, ಸೋಲಾರ್ ದೀಪ ಅಳವಡಿಕೆ, ಸ್ವಯಂಸೇವಕರಿಗೆ ಕೃತಕ ಕೈ ಜೋಡಣೆ, ಕೃತಕ ಹಲ್ಲಿನ ಜೋಡಣೆ ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಫಲಾನುಭವಿಗಳಲ್ಲಿ ಉತ್ಸಾಹ ತುಂಬಿರುವರು. ಇವರ ಕೆಲಸವನ್ನು ಗಮನಿಸಿ ಪದವಿಪೂರ್ವ ಶಿಕ್ಷಣ ಇಲಾಖೆ ಶ್ರೀಮತಿ ಸವಿತಾ ಎರ್ಮಾಳ್ ಇವರನ್ನು ಎನ್.ಎಸ್.ಎಸ್.ನ ಮಂಗಳೂರು ವಿಭಾಗದ ವಿಭಾಗಾಧಿಕಾರಿ ಯನ್ನಾಗಿ ನಿಯೋಜಿಸಿ ಆದೇಶಿಸಿದೆ. ಉಡುಪಿ, ಮಂಗಳೂರು ಮತ್ತು ಕೊಡಗು ಜಿಲ್ಲೆಗಳು ಮಂಗಳೂರು ವಿಭಾಗದ ವ್ಯಾಪ್ತಿಯಲ್ಲಿರಲಿದೆ. ಇತ್ತೀಚೆಗೆ ಶ್ರೀಮತಿ ಸವಿತಾ ಎರ್ಮಾಳ್ ಇವರು ರಾಜ್ಯ ಮಟ್ಟದ "ಉತ್ತಮ ಉಪನ್ಯಾಸಕಿ ಪ್ರಶಸ್ತಿ" ಪಡೆದಿರುತ್ತಾರೆ.




ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ
ಆದರದ ಸ್ವಾಗತ ಬಯಸುವ
ಹೋಟೇಲ್ ವೃಂದಾವನ, ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್, ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್, ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್, ಶ್ರೀ ಧವಳ ಎಲ್ಲೂರು
ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.
ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ
ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org